ಸಂಪುಟ 01 | ಸಂಚಿಕೆ 139 | ಬುಧವಾರ 08 ಏಪ್ರಿಲ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಮೃಗಾಲಯ ಪ್ರೇಮಿಗಳ ದಿನ

ಸ್ಥಳೀಯ ಮೃಗಾಲಯಗಳಿಗೆ ಭೇಟಿ ನೀಡುವುದನ್ನು ಪ್ರೋತ್ಸಾಹಿಸಲು, ವನ್ಯಜೀವಿ ಸಂರಕ್ಷಣಾ ಪ್ರಯತ್ನಗಳನ್ನು ಶ್ಲಾಘಿಸಲು ಮತ್ತು ಪ್ರಾಣಿಗಳ ಆರೈಕೆ ಉಪಕ್ರಮಗಳನ್ನು ಬೆಂಬಲಿಸಲು ರಾಷ್ಟ್ರೀಯ ಮೃಗಾಲಯ ಪ್ರೇಮಿಗಳ ದಿನವನ್ನು ವಾರ್ಷಿಕವಾಗಿ ಏಪ್ರಿಲ್ 8 ರಂದು ಆಚರಿಸಲಾಗುತ್ತದೆ. ಅಳಿವಿನಂಚಿನಲ್ಲಿರುವ ಪ್ರಭೇದಗಳ ಸಂತಾನೋತ್ಪತ್ತಿ, ಸಂಶೋಧನೆ ನಡೆಸುವುದು ಮತ್ತು ಪ್ರಾಣಿಗಳ ಆವಾಸಸ್ಥಾನಗಳ ಬಗ್ಗೆ ಸಾರ್ವಜನಿಕ ಶಿಕ್ಷಣವನ್ನು ಒದಗಿಸುವಲ್ಲಿ ಮೃಗಾಲಯಗಳು ವಹಿಸುವ ನಿರ್ಣಾಯಕ ಪಾತ್ರವನ್ನು ಈ ದಿನವು ಎತ್ತಿ ತೋರಿಸುತ್ತದೆ.

## ಸುಭಾಷಿತ

ಮನುಷ್ಯನಲ್ಲಿರುವ ಪರಿಪೂರ್ಣತೆ ಮತ್ತು ವ್ಯಕ್ತಿತ್ವವನ್ನು ಹಿಗ್ಗಿಸುವುದೇ ನಿಜವಾದ ಶಿಕ್ಷಣ.

–ಸ್ವಾಮಿ ವಿವೇಕಾನಂದ

# ಧಾರ್ಮಿಕ ನಂಬಿಕೆಯಿಂದ ಶಬರಿಮಲೆಗೆ ಮಹಿಳೆಯರ ಪ್ರವೇಶ ನಿರಾಕರಣೆ :ಕೇಂದ್ರ ಸರ್ಕಾರ



**ನವದೆಹಲಿ: ಶಬರಿಮಲೆ ದೇವಸ್ಥಾನದಲ್ಲಿ ಮಹಿಳೆಯ-ರಿಗೆ ಪ್ರವೇಶ ನಿರಾಕರಿಸಿರುವುದು ಅಶುದ್ಧತೆ ಅಥವಾ ಕೀಳರಿಮೆಯಿಂದಲ್ಲ ಬದಲಿಗೆ ಧಾರ್ಮಿಕ ಆಚರಣೆ ಹಾಗೂ ನಂಬಿಕೆಯಿಂದಾಗಿ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.**

ಕೇರಳದ ಪ್ರಸಿದ್ಧ ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯಸ್ಸಿನ ಮಹಿಳೆಯರಿಗೆ ಪ್ರವೇಶವನ್ನು ಅನುಮತಿಸುವ ತನ್ನ 2018 ರ ತೀರ್ಪಿನ ವಿರುದ್ಧ ಸಲ್ಲಿಸಲಾದ ದೀರ್ಘಕಾಲದಿಂದ ಬಾಕಿ ಇರುವ ಪರಿಶೀಲನಾ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಎತ್ತಿಕೊಳ್ಳುವ ಮುನ್ನಕೇಂದ್ರ ಸರ್ಕಾರವು ಲಿಂಗ ತಾರತಮ್ಯದ ಅಂಶಗಳಲ್ಲ ಆದರೆ ಧಾರ್ಮಿಕ ಆಚರಣೆ, ನಂಬಿಕೆ ಮತ್ತು ದೇವರ ನಿರ್ದಿಷ್ಟ ಪಾತ್ರದಲ್ಲಿ ಬೇರೂರಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಶಬರಿಮಲೆಯಲ್ಲಿ ಮಹಿಳೆಯರ ಮೇಲಿನ ನಿಷೇಧವು (10–50 ವರ್ಷ ವಯಸ್ಸಿನವರು) ಅಯ್ಯಪ್ಪನ ನೈಷ್ಠಿಕ ಬ್ರಹ್ಮಚಾರಿ ಸ್ವಭಾವದಿಂದ ಬಂದಿದೆ, ಅಶುದ್ಧತೆ ಅಥವಾ ಕೀಳರಿಮೆಯಿಂದಲ್ಲ ಎಂದು ವಿಚಾರಣೆಗೆ ಮುಂಚಿತವಾಗಿ ಸಲ್ಲಿಸಲಾದ ಲಿಖಿತ ಅರ್ಜಿಯಲ್ಲಿ ಕೇಂದ್ರ ಸರ್ಕಾರ ತಿಳಿಸಿದೆ.

ಮಹಿಳೆಯರ ಪ್ರವೇಶವನ್ನು ಅನುಮತಿಸುವುದರಿಂದ ಇಲ್ಲಿನ ಪೂಜೆಯ ಸ್ವರೂಪವನ್ನೇ ಬದಲಾಯಿಸುತ್ತದೆ, ಸಂವಿಧಾನದಿಂದ ರಕ್ಷಿಸಲ್ಪಟ್ಟ ಧಾರ್ಮಿಕ ಬಹುತ್ವವನ್ನು ದುರ್ಬಲಗೊಳಿಸುತ್ತದೆ. ಭಕ್ತರು, ಅಂದರೆ ಪುರುಷರು ಮತ್ತು ಮಹಿಳೆಯರು ಇಬ್ಬರೂ ಶತಮಾನಗಳಿಂದ ಶಬರಿಮಲೆಯಲ್ಲಿ ದೇವಾಲಯದ ಸ್ಥಾಪಿತ ಸಂಪ್ರದಾಯಗಳಿಗೆ ಅನುಗುಣವಾಗಿ ಭಗವಾನ್ ಅಯ್ಯಪ್ಪನನ್ನು ಪೂಜಿಸುತ್ತಿದ್ದಾರೆ ಎಂದು ಕೇಂದ್ರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದರು. ಕೇರಳದ ಶಬರಿಮಲೆ ದೇವಸ್ಥಾನಕ್ಕೆ ಋತುಮತಿ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿನ ನಿರ್ಬಂಧವನ್ನು ಎತ್ತಿಹಿಡಿಯುವಂತೆ ಕೇಂದ್ರವು ಸುಪ್ರೀಂ ಕೋರ್ಟ್ ಅನ್ನು ಒತ್ತಾಯಿಸಿತು, ಈ ವಿಷಯವು ಧಾರ್ಮಿಕ ನಂಬಿಕೆ ಮತ್ತು ಪಂಗಡದ ಸ್ವಾಯತ್ತತೆಯ ವ್ಯಾಪ್ತಿಯಲ್ಲಿ ಬರುತ್ತದೆ ಮತ್ತು ನ್ಯಾಯಾಂಗ ಪರಿಶೀಲನೆಯ ವ್ಯಾಪ್ತಿಯನ್ನು ಮೀರಿದೆ ಎಂದು ವಾದಿಸಿತು.

ವೈಚಾರಿಕತೆ, ಆಧುನಿಕತೆ, ಅಥವಾ ವೈಜ್ಞಾನಿಕ ರಕ್ಷಣೆ ಮುಂತಾದ ಆಧಾರದ ಮೇಲೆ ಧಾರ್ಮಿಕ ಆಚರಣೆಗಳನ್ನು ನಿರ್ಣಯಿಸುವ ಪರಿಶೀಲನಾ ಮಾನದಂಡಗಳನ್ನು ಅಳವಡಿಸಿಕೊಳ್ಳುವುದರ ವಿರುದ್ಧ ಅದು ಪೀಠವನ್ನು ಎಚ್ಚರಿಸಿತು.ಅಂತಹ ವ್ಯಾಯಾಮವು, ನ್ಯಾಯಾಲಯಗಳು ನಂಬಿಕೆಯ ಆಂತರಿಕ ತಿಳುವಳಿಕೆಗಾಗಿ ತಮ್ಮದೇ ಆದ ತಾತ್ವಿಕ ದೃಷ್ಟಿಕೋನಗಳನ್ನು ಬದಲಿಸುವಂತೆ ಮಾಡುತ್ತದೆ ಎಂದು ಅದು ಹೇಳಿದೆ. ಒಂದು ಆಚರಣೆಯು ತರ್ಕಬದ್ಧವಾಗಿದೆಯೇ, ನ್ಯಾಯಾಂಗ ಸಂವೇದನೆಗಳಿಗೆ ಸ್ವೀಕಾರಾರ್ಹವಾಗಿದೆಯೇ ಅಥವಾ ಪರಿವರ್ತಕ ಸಾಂವಿಧಾನಿಕ ಸಿದ್ಧಾಂತಗಳೊಂದಿಗೆ ಹೊಂದಿಕೆಯಾಗಿದೆಯೇ ಎಂಬುದರ ಕುರಿತು ವಿಚಾರಣೆಯು ಸಾಂವಿಧಾನಿಕ ವಿಮರ್ಶೆಯಲ್ಲ ಎಂದು ಕೇಂದ್ರವು ಹೇಳಿದೆ, ನ್ಯಾಯಾಧೀಶರು ಧಾರ್ಮಿಕ ಪಠ್ಯಗಳನ್ನು ವ್ಯಾಖ್ಯಾನಿಸಲು ಅಥವಾ ದೇವತಾಶಾಸ್ತ್ರದ ಪ್ರಶ್ನೆಗಳನ್ನು ನಿರ್ಣಯಿಸಲು ತರಬೇತಿ ಪಡೆದಿಲ್ಲ ಅಥವಾ ಸಾಂಸ್ಥಿಕವಾಗಿ ಸಜ್ಜಾಗಿಲ್ಲ ಎಂದು ಕೇಂದ್ರವು ಹೇಳಿದೆ.

## ದೀಪಾ ಗೊಡೆಪಾಡ್ ಅವರಿಂದ ಅಧಿಕಾರ ಸ್ವೀಕಾರ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲಾ ಗೃಹ ರಕ್ಷಕ ದಳದ ಜಿಲ್ಲಾ ಸಮಾದೇಷ್ಟರ ಹುದ್ದೆಯ ಪ್ರಭಾರ ಅಧಿಕಾರವನ್ನು ದೀಪಾ ಗೊಡೆಪಾಡ್ ಎಸ್.ಎ ಅವರು ಏಪ್ರಿಲ್ 06ರ ಮಂಗಳವಾರ ದಂದು ಅಧಿಕಾರ ಸ್ವೀಕರಿಸಿದರು. ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಜಿ.ಹರೀಶ್ ಅವರು ಅಧಿಕಾರ ಹಸ್ತಾಂತರಿಸಿದರು ಎಂದು ಗೃಹ ರಕ್ಷಕ ದಳದ ಕಚೇರಿಯ ಪ್ರಕಟಣೆ ತಿಳಿಸಿದೆ.**

# ಡಾ. ಪ್ರವೀಣ್ ಬಿರಾದಾರ್ ಅವರಿಗೆ 'ಡಾ. ಬಿ.ಆರ್. ಅಂಬೇಡ್ಕರ್ ಅಂತಾರಾಷ್ಟ್ರೀಯ ಪ್ರಶಸ್ತಿ' ಘೋಷಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಳಿಕೋಟೆ ತಾಲೂಕಿನ ಬೇಕಿನಾಳ ಗ್ರಾಮದ ಡಾ. ಪ್ರವೀಣ್ ಬಿರಾದಾರ ಅವರಿಗೆ ಕಲಬುರ್ಗಿ: ಶಿಕ್ಷಣ ಮತ್ತು ಸಮಾಜಸೇವಾ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡುತ್ತಿರುವ ಕಲಬುರ್ಗಿಯ ಜ್ಞಾನ ಶಾರದೆ ಅಕಾಡೆಮಿಯ ಅಧ್ಯಕ್ಷರಾದ ಡಾ. ಪ್ರವೀಣ್ ಬಿರಾದಾರ್ ಅವರು 2026ನೇ ಸಾಲಿನ ಪ್ರತಿಷ್ಠಿತ "ಡಾ. ಬಿ.ಆರ್. ಅಂಬೇಡ್ಕರ್ ಅಂತಾರಾಷ್ಟ್ರೀಯ ಪ್ರಶಸ್ತಿ"ಗೆ ಭಾಜನರಾಗಿದ್ದಾರೆ.**

ಭಾರತ ಸರ್ಕಾರದ ನೋಂದಾಯಿತ ಸಂಸ್ಥೆಯಾದ "ಅಂತರರಾಷ್ಟ್ರೀಯ ಹಿಂದೂ ಮಹಾಸಭಾ" ವತಿಯಿಂದ ಈ ಪ್ರಶಸ್ತಿಯನ್ನು ಘೋಷಿಸಲಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಗುರುತಿಸಿ ಈ ಗೌರವ ನೀಡಲಾಗುತ್ತಿದೆ.



ಪ್ರಶಸ್ತಿ ಪ್ರದಾನ ಸಮಾರಂಭ:
ದಿನಾಂಕ: ಏಪ್ರಿಲ್ 15, 2026
ಸಂದರ್ಭ: ಅಂಬೇಡ್ಕರ್ ಜಯಂತಿ ಪ್ರಯುಕ್ತ ಆಯೋಜಿಸಲಾದ ಅಂತರರಾಷ್ಟ್ರೀಯ ಪ್ರಧಾನ ಸಮಾರಂಭ.

ಡಾ. ಪ್ರವೀಣ್ ಬಿರಾದಾರ್ ಅವರು ಶಿಕ್ಷಣ ಕ್ಷೇತ್ರದಲ್ಲಿ ಮಾಡುತ್ತಿರುವ ಸುಧಾರಣೆಗಳು ಹಾಗೂ ಅವರ ಅಮೂಲ್ಯವಾದ ಸಮಾಜಮುಖಿ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಎಂದು ಅಂತರರಾಷ್ಟ್ರೀಯ ಹಿಂದೂ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರಾದ ಅಹಲಕರ್ ಸಿಂಗ್ ನಗರ್, ರಾಜ್ಯಾಧ್ಯಕ್ಷರಾದ ಶ್ರೀ ಸೋಮಶೇಖರ ಪಿ. ಯಾದವ್ ಹಾಗೂ ವಿದ್ಯಾರ್ಥಿ ಘಟಕದ ರಾಜ್ಯಾಧ್ಯಕ್ಷರು ಅಂತಾರಾಷ್ಟ್ರೀಯ ಹಿಂದೂ ಮಹಾಸಭಾ ಸಾಗರ್ ಆರ್. ಕಲಾದಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಪ್ರಶಸ್ತಿ ಆಯ್ಕೆಗೆ ಸಂಬಂಧಿಸಿದಂತೆ ಪ್ರತಿಯನ್ನು ರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ಲೋಕಸಭಾ ಸಭಾಧ್ಯಕ್ಷರು ಹಾಗೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರು ಸೇರಿದಂತೆ ವಿವಿಧ ಉನ್ನತ ಕಚೇರಿಗಳಿಗೆ ಮಾಹಿತಿಗಾಗಿ ರವಾನಿಸಲಾಗಿದೆ. ಡಾ. ಬಿರಾದಾರ್ ಅವರ ಈ ಸಾಧನೆಗೆ ಜಿಲ್ಲೆಯ ಗಣ್ಯರು ಹಾಗೂ ಹಿತೈಷಿಗಳು ಹರ್ಷ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.

# ಏಪ್ರಿಲ್ 8ರಂದು ಜಿಲ್ಲಾ ಉಸ್ತುವಾರಿ ಸಚಿವರ ಪ್ರವಾಸ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಆಗಿರುವ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು 2026ರ ಏಪ್ರಿಲ್ 8ರಂದು ರಾಯಚೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.**



ಅವರು ಏಪ್ರಿಲ್ 7ರ ಸಂಜೆ 5ಗಂಟೆಗೆ ದಾವಣಗೆರೆಯಿಂದ ನಿರ್ಗಮಿಸಿ, ರಾತ್ರಿ 11ಗಂಟೆಗೆ ರಾಯಚೂರು ನಗರಕ್ಕೆ ಆಗಮಿಸಲಿದ್ದಾರೆ. ಏಪ್ರಿಲ್ 8ರ ಬೆಳಿಗ್ಗೆ 10.30ಕ್ಕೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಗಳ ಕಚೇರಿಯ ಸಭಾಂಗಣದಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಗಳು ಮತ್ತು ಜಾನುವಾರುಗಳಿಗೆ ಮೇವಿನ ಲಭ್ಯತೆಯ ಕುರಿತು ಜಿಲ್ಲಾಡಳಿತದೊಂದಿಗಿನ ಸಭೆಯಲ್ಲಿ ಭಾಗವಹಿಸುವರು.

ಮಧ್ಯಾಹ್ನ 12.30ಕ್ಕೆ ಎಪಿಎಮ್‌ಸಿ ಕಲ್ಯಾಣ ಮಂಟಪದಲ್ಲಿ ಮದುವೆ ಸಮಾರಂಭದಲ್ಲಿ ಭಾಗವಹಿಸುವರು. ಮಧ್ಯಾಹ್ನ 2.30ಕ್ಕೆ ರಾಯಚೂರಿನಿಂದ ರಸ್ತೆ ಮಾರ್ಗವಾಗಿ ಕಲಬುರಗಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೀರಿನ ಜಲಸಂಗ್ರಹಕ್ಕೆ ಭೇಟಿ ನೀಡಿದ ಮನವಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್

ನೈಜ್ಯ ದೆಸೆ ನ್ಯೂಸ್

**ಮಾನ್ವಿ; ಮಾನ್ವಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾನ್ವಿ ನಗರದ ಕುಡಿಯುವ ನೀರಿನ ಜಲಸಂಗ್ರಹಕ್ಕೆ ಭೇಟಿ ನೀಡಿದ ಪುರಸಭೆಯ ಮಾಜಿ ಅಧ್ಯಕ್ಷರು ಹಾಗೂ ನಗರ ಯೋಜನಾ ಪ್ರಾಧಿಕಾರದ ಹಾಲಿ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್ ಹಾಗೂ ಮಾನ್ವಿ ತಾಲೂಕು ಪಂಚಾ ಗ್ಯಾರಂಟಿಗಳ ಅಧ್ಯಕ್ಷರಾದ ಶ್ರೀ ಬಿಕೆ ಅಮರೇಶಪ್ಪ ವಕೀಲರು, ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಮಾನ್ವಿ ಪುರಸಭೆಯ ಮುಖ್ಯಾಧಿಕಾರಿಯಾದ ಪರಶುರಾಮ್ ದೇವೆಮನೆಯವರಿಗೆ ಬೇಸಿಗೆ ಕಾಲದಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.**



ಈ ವೇಳೆ ಮಾತನಾಡಿದ ಮುಖಂಡರು, ಬೇಸಿಗೆ ತೀವ್ರವಾಗುತ್ತಿರುವ ಹಿನ್ನೆಲೆಯಲ್ಲಿ ನೀರಿನ ಬಳಕೆಯಲ್ಲಿ ಜಾಗೃತಿ ಅಗತ್ಯವಿದ್ದು, ನೀರು ಸಂಗ್ರಹಣೆ, ಸಮರ್ಪಕ ವಿತರಣೆ ಹಾಗೂ ಅನಾವಶ್ಯಕ ನೀರು ಪೋಲಾಗದಂತೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ತಿನ ಸಭಾ ನಾಯಕರಾದ ಶ್ರೀ ಎನ್ ಎಸ್ ಬೋಸರಾಜು ಜೀ ಮತ್ತು ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಜಿ ಹಂಪಯ್ಯ ನಾಯಕ್ ಸಾಹುಕಾರ್ ಅವರು ರಾಜ್ಯ ಸರ್ಕಾರದ ಜನ ಸಂಪನ್ಮೂಲ ಸಚಿವರೊಂದಿಗೆ ಚರ್ಚಿಸಿ ರಾಯಚೂರು ಜಿಲ್ಲೆ ಹಾಗೂ ಮಾನ್ವಿ ಕ್ಷೇತ್ರದ ಗ್ರಾಮಗಳಿಗೆ ತುಂಗಭದ್ರ ಜಲಾಶಯದಿಂದ ನಿರಂತರವಾಗಿ ನೀರು ಹರಿಸಲಾಗುತ್ತಿದೆ ಎಂದು ತಿಳಿಸಿದರು.

ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಅಧಿಕಾರಿಗಳು ಸದಾ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚನೆ ನೀಡಲಾಗಿದ್ದು, ಸಾರ್ವಜನಿಕರ ಅಗತ್ಯಗಳಿಗೆ ಪ್ರಾಮುಖ್ಯತೆ ನೀಡುವಂತೆ ಸಂಬಂಧಿಸಿದ ಇಲಾಖೆಗೆ ನಿರ್ದೇಶನ ನೀಡಲಾಗಿದೆ. ಈ ಸಂದರ್ಭದಲ್ಲಿ ಸ್ಥಳೀಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು.

# ಹಿಮೋಫಿಲಿಯಾ ಲಸಿಕೆಗೆ ಚಾಲನೆ ಮಕ್ಕಳು ಇದರ ಸದುಪಯೋಗ ಪಡೆಯಲಿ: ಡಾ.ಸುರೇಂದ್ರ ಬಾಬು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಕ್ತಸ್ರಾವ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಹಿಮೋಫಿಲಿಯಾ ಇಂಜೆಕ್ಷನ್ ನೀಡುತ್ತಿದ್ದು, ಕಾಯಿಲೆಗೆ ಒಳಗಾದ ಮಕ್ಕಳು ಇದರ ಸದುಪಯೋಗ ಪಡೆಯುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರ ಬಾಬು ಅವರು ಸಲಹೆ ನೀಡಿದರು. ಏಪ್ರಿಲ್ 06ರ ಸೋಮವಾರ ದಂದು ನಗರದ ರಿಮ್ಸ್ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಿಮ್ಸ್ ಆಸ್ಪತ್ರೆ ಸಹಯೋಗದಲ್ಲಿ ಕುಸುಮ ಸಂಜೀವಿನಿ ಯೋಜನೆಯಡಿ ಹಮ್ಮಿಕೊಂಡಿದ್ದ ಚುಚ್ಚು ಮದ್ದು ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.**




18 ಜನರಿಗೆ ಚುಚ್ಚು ಮದ್ದು ನೀಡಲಾಗಿದ್ದು, ಒಂದು ಇಂಜೆಕ್ಷನ್ ಬೆಲೆ ಸುಮಾರು 1.4 ಲಕ್ಷ ಆಗಲಿದೆ. ಇದರಿಂದ ಹಿಮೋಫಿಲಿಯಾ ರೋಗಿಗಳಿಗೆ ಅನುಕೂಲವಾಗಲಿದೆ ಎಂದರು. ಕುಟುಂಬದ ಮೇಲೆ ಆರ್ಥಿಕ ದುಷ್ಪರಿಣಾಮ, ಮನಸ್ಸಿಗೆ ನೆಮ್ಮದಿಯಿಲ್ಲದಿರುವುದಕ್ಕೆ ಕಾರಣವಾಗುವ ಹಿಮೋಫಿಲಿಯಾ ಎನ್ನುವುದು ರಕ್ತವು ಸರಿಯಾಗಿ ಹೆಪ್ಪುಗಟ್ಟದ, ಹೆಚ್ಚಾಗಿ ಆನುವಂಶಿಕವಾಗಿ ಬರುವ ಅಪರೂಪದ ರಕ್ತಸ್ರಾವದ ಕಾಯಿಲೆಯಾಗಿದೆ.



ಇದರಲ್ಲಿ ರಕ್ತ ಹೆಪ್ಪುಗಟ್ಟಲು ಅಗತ್ಯವಾದ ಪ್ರೋಟೀನ್‌ಗಳ (ಕ್ಲಾಟಿಂಗ್ ಫ್ಯಾಕ್ಟರ್ಸ್) ಕೊರತೆಯಿಂದಾಗಿ, ಗಾಯವಾದಾಗ ಅಥವಾ ಆಂತರಿಕವಾಗಿ ದೀರ್ಘಕಾಲ ರಕ್ತಸ್ರಾವವಾಗುವ ಹಿಮೋಫಿಲಿಯಾ ಎ ಫ್ಯಾಕ್ಟರ್ 8ರ ರೋಗದ ದುಗುಡವನ್ನು ದೂರ ಮಾಡಲು ದೇಶದಲ್ಲಿಯೇ ಕರ್ನಾಟಕ ಸರಕಾರವು ಉಚಿತವಾಗಿ ಹೆಮಿಲಿಬ್ರಾ ಲಸಿಕೆ ನೀಡಲು ಆರಂಭಿಸಿದೆ ಎಂದರು.

ಕುಸುಮ ಸಂಜೀವಿನಿ ಯೋಜನೆಯಡಿ ಉಚಿತವಾಗಿ ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಒಂದು ಮಗುವಿಗೆ ವರ್ಷಕ್ಕೆ ಸುಮಾರು 5 ಲಕ್ಷ ಮೌಲ್ಯದ ಇಂಜೆಕ್ಷನ್ ಅನ್ನು ಸಂಪೂರ್ಣ ಉಚಿತವಾಗಿ ನೀಡಲಾಗುವುದು ಎಂದು ತಿಳಿಸಿದರು. ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ವಿಜಯಶಂಕರ್ ಅವರು ಮಾತನಾಡಿ, ಪ್ರತಿ ತಿಂಗಳು ಒಂದನೇಯ ಶನಿವಾರದಂದು ರಿಮ್ಸ್ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಚುಚ್ಚು ಮದ್ದು ನೀಡಲಾಗುತ್ತದೆ. ಸಾಂಕ್ರಾಮಿಕ ರೋಗವಲ್ಲದ ಆನುವಂಶಿಕ ಖಾಯಿಲೆಯಾಗಿದ್ದು, ಪದೆಪದೆ ಬರುವ ನೋವನ್ನು ಚುಚ್ಚುಮದ್ದು ಕಡಿಮೆ ಮಾಡುತ್ತದೆ. ಅಲ್ಲದೆ ಆಗಾಗ್ಗೆ ಉಂಟಾಗುವ ರಕ್ತಸ್ರಾವದಿಂದ ರಕ್ಷಿಸುವ ಕಾರ್ಯ ಮಾಡುತ್ತದೆ ಎಂದರು. ಹಿಮೋಫಿಲಿಯಾದ ಪ್ರಮುಖ ಕಾರಣ: ಇದು ಹೆಚ್ಚಾಗಿ ತಳಿ ಅಥವಾ ವಂಶವಾಹಿ ಮೂಲಕ

## ಸಾಹಿತ್ಯ ಸಿಂಚನ

ಅಧರಂ ಮಧುರಂ..!

ಅಧರದ ಲೇಖನಿಯಲಿ
ಒಲವಿನ ಶಾಯಿ ತುಂಬಿ
ಕದಪುಗಳ ಹಾಳೆ ಮೇಲೆ
ಮುತ್ತಿನ ಕಾವ್ಯ ಬರೆಯಲೆ.?

ತುಟಿಗಳ ಕುಂಚದಲಿ
ಪ್ರೇಮದ ಬಣ್ಣಗಳ ತುಂಬಿ
ಕೆನ್ನೆಯ ಕ್ಯಾನ್ವಾಸಿನ ಮೇಲೆ
ಚುಂಬನ ಚಿತ್ತಾರ ಬಿಡಿಸಲೆ.?

ಅಧರಗಳ ಉಳಿಯಿಂದ
ಅನುರಾಗದ ಸುತ್ತಿಗೆ ಬಳಸಿ
ಕಪೋಲಗಳ ಹಾಸಿನ ಮೇಲೆ
ಮುತ್ತಿನ ಶಿಲ್ಪ ಕೆತ್ತಲೆ.?

ಎದೆಯ ಭಾವ ಬತ್ತಿಯಲಿ
ಪ್ರೀತಿಭಾಷ್ಯದ ತೈಲ ತುಂಬಿ
ನಿನ್ನಯ ನೊಸಲಿನ ಮೇಲೆ
ಚುಂಬನ ಪ್ರಣತೆ ಬೆಳಗಲೆ.!

ತುಟಿಗಳ ಸವಿಸುಧೆಯಿಂದ
ಚುಂಬಕ ಮಧುಧಾರೆ ಹರಿಸಿ
ಗಲ್ಲದ ಸೂಜಿಗಲ್ಲಿನ ಮೇಲೆ
ಮುತ್ತುಮತ್ತಿನ ಮುದ್ರೆ ಒತ್ತಲೆ?

ಒಂದೊಂದು ಮುತ್ತಿನಲು
ಹೃದಯ ಜೀವಸೆಲೆ ತುಂಬಿ
ಕಂಗಳ ಕೋಲ್ಮಿಂಚ ಮೇಲೆ
ಚುಂಬನ ಬೆಳದಿಂಗಳ ಸ್ಫುರಿಸಲೆ.?

ನನ್ನಯ ಉಸಿರು ಉಸಿರಿನಲಿ
ಚಿರಪ್ರೇಮದ ಚಿಲುಮೆ ಚಿಮ್ಮಿಸಿ
ಹುಬ್ಬುಗಳ ನಡುವಿನಲಿ ಬಾಲೆ
ಆರಾಧನೆಯ ಮುತ್ತುತಿಲಕವಿಡಲೆ.?

ಎ,ಎನ್.ರಮೇಶ್.ಗುಬ್ಬಿ.

## ಗಡಿ ಭಾಗದ ಮಕ್ಕಳ ಸಮಸ್ಯೆಗಳ ಪರಿಹಾರಕ್ಕೆ ಕ್ರಮ: ಅಪರ ಜಿಲ್ಲಾಧಿಕಾರಿ ಶಿವಾನಂದ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಕೃಷ್ಣಾ ಗ್ರಾಮದ ಕನ್ನಡ ಶಾಲೆಗೆ ರಾಯಚೂರಿನ ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಏಪ್ರಿಲ್ 06ರ ಸೋಮವಾರ ದಂದು ಭೇಟಿ ನೀಡಿ, ಹಳೆ ವಿದ್ಯಾರ್ಥಿಗಳು ಹಾಗೂ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಗಡಿ ಪ್ರದೇಶದಲ್ಲಿನ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದೆಂದರು.**

ಕೃಷ್ಣಾವರೆಗೆ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆಯಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಸೂಕ್ತ ಪರಿಹಾರ ಆಗುವಂತೆ ನೋಡಿಕೊಳ್ಳುತ್ತೇವೆ. ಪ್ರವೇಶಕ್ಕಾಗಿ ವಲಸೆ ಪ್ರಮಾಣ ಪತ್ರ ಹಾಗೂ ಇತರೆ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಹುಡುಕಿ ವಿದ್ಯಾರ್ಥಿಗಳಿಗೆ ಸಹಕಾರ ನೀಡಲಾಗುವುದು. ಉದ್ಯೋಗದಲ್ಲಿ ಶೇ.5ರಷ್ಟು ಮೀಸಲಾತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರದ ಮೂಲಕ ತಿಳಿಸುತ್ತೇವೆ ಎಂದು ಅಪರ ಜಿಲ್ಲಾಧಿಕಾರಿಗಳು ಹೇಳಿದರು.



ಗಡಿ ಶಾಲಾ ಮಕ್ಕಳು ಸುಮಾರು 51 ವರ್ಷಗಳಿಂದ 10ನೇ ತರಗತಿ ನಂತರ ಪ್ರವೇಶಕ್ಕಾಗಿ, ವಲಸೆ ಪ್ರಮಾಣ ಪತ್ರಕ್ಕಾಗಿ, ಹಾಸ್ಟೆಲ್, ಬಸ್ ಪಾಸ್, ಜಾತಿ ಪ್ರಮಾಣ ಪತ್ರ, ಶಿಷ್ಯ ವೇತನ, ಉದ್ಯೋಗಕ್ಕೆ ಸಂಬಂಧ ಪಟ್ಟಂತೆ ಸಾಕಷ್ಟು ಸಮಸ್ಯೆಗಳು ಕಂಡು ಬರುತ್ತಿವೆ.

ಕರ್ನಾಟಕ ಸರಕಾರ ಇದರ ಬಗ್ಗೆ ಕಾಳಜಿ ವಹಿಸಬೇಕು ಎಂದು ಕೃಷ್ಣಾ ಮಂಡಲದ ವಿದ್ಯಾಧಿಕಾರಿ ನಿಜಾಮುದ್ದೀನ್, ಗಡಿನಾಡು ಕನ್ನಡದ ಅಧ್ಯಕ್ಷರು ಮತ್ತು ಗೌರವ ಅಧ್ಯಕ್ಷರಾದ ಅಮರ್‌ದೀಕ್ಷಿತ್, ರಾಮಲಿಂಗಪ್ಪ ಕುನ್ನಿ ಅವರು ಅಪರ ಜಿಲ್ಲಾಧಿಕಾರಿ ಗಮನಕ್ಕೆ ತಂದರು. ಇದೇ ಸಂದರ್ಭದಲ್ಲಿ ರಾಯಚೂರು ತಹಶೀಲ್ದಾರ ಸುರೇಶ್ ವರ್ಮಾ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಸೋಮಶೇಖರಪ್ಪ ಹೋಕ್ರಾಣಿ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪ್ರವೀಣ್, ಸಾರ್ವಜನಿಕ ಶಿಕ್ಷಣ ಇಲಾಖೆಯ ರಂಗಸ್ವಾಮಿ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಶಿವಮಾನಪ್ಪ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ರಾಯಚೂರು ಬಿಇಓ ಈರಣ್ಣ ಕೋಸಗಿ, ಕೃಷ್ಣಾ ಮಂಡಲದ ತಹಶೀಲ್ದಾರರು ಶ್ರೀನಿವಾಸ್, ಕೃಷ್ಣಾ ಪ್ರೌಢ ಶಾಲೆಯ ಮುಖ್ಯಗುರು ಕಿಶೋರ್ ಕುಮಾರ್, ಶಾಲೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು, ಕೃಷ್ಣಾ ಗ್ರಾಮದ ಅಧ್ಯಕ್ಷರು ಎಸ್.ನಾಗೇಂದ್ರ ಹಾಗೂ ಶಾಲೆ ಹಳೆ ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಾನ್ವಿಯಲ್ಲಿ ಮೊಟ್ಟ ಮೊದಲು ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಿದ್ದು ಮಧುಸೂದನ್ ಗುಪ್ತಾಜೀಯವರು :ಜಿಶಾನ ಅಖಿಲ್ ಸಿದ್ದಿಕಿ ಸಿಂಡಿಕೇಟ್ ಸದಸ್ಯರು




ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಾನ್ವಿ ಪಟ್ಟಣದಲ್ಲಿ ಮೊಟ್ಟ ಮೊದಲ ಆಂಗ್ಲ ಮಾಧ್ಯಮ ಶಿಕ್ಷಣವನ್ನು ಪ್ರಾರಂಭ ಮಾಡಿ ಹಲವಾರು ವಿದ್ಯಾರ್ಥಿಗಳಿಗೆ ದಾರಿದೀಪವಾದ ಮಧುಸೂದನ್ ಗುಪ್ತಾ ಜಿಯವರು ಮಾನ್ವಿ ಭಾಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸೇವೆ ಅಪಾರವಾದದ್ದು ಎಂದು ಜಿಶಾನ ಅಕಿಲ್ ಸಿದ್ದಿಕಿ ಸಿಂಡಿಕೇಟ್ ಸದಸ್ಯರು ಆದಿಕವಿ ಶ್ರೀ ಮಹರ್ಷಿ ವಿಶ್ವ ವಿದ್ಯಾಲಯ ರಾಯಚೂರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.**

ಪಟ್ಟಣದ ಶಾರದಾ ವಿದ್ಯಾನಿಕೇತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳಿಂದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಮಾನ್ವಿಯಲ್ಲಿ ಮೊಟ್ಟಮೊದಲ ಆಂಗ್ಲ ಮಾಧ್ಯಮ ಶಾಲೆಯನ್ನು 1991 ರಲ್ಲಿ ಪ್ರಾರಂಭಿಸಿ ಇಂದು ಬೃಹದಾಕರವಾಗಿ ಬೆಳೆದು ನಿಲ್ಲುವುದಕ್ಕೆ ಮಧುಸೂದಾನ್ ಗುಪ್ತಾ ಜೀ ಯವರ ಶೈಕ್ಷಣಿಕ ಸೇವೆ ಎಂದೆದಿಗೂ ಅಜರಾಮರವಾಗಿದೆ. ಶಾರದಾ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ಉನ್ನತವಾದ ಸ್ಥಾನಗಳನ್ನು ಪಡೆದು ಕೊಂಡಿದ್ದಾರೆ ಎಂದು ಹೇಳಿದರು. ಇನ್ನೊರ್ವ ಮುಖ್ಯ ಅತಿಥಿಯಾದ ಶಿವಣ್ಣ ವಕೀಲರು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವ ವಿದ್ಯಾಲಯ ರಾಯಚೂರು ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಹಳೆ ಬೇರು ಹೊಸ ಚಿಗರು ಎಂಬ ಗಾದೆಯಂತೆ ಹೊಸದಾಗಿ ಕಾಲೇಜಿಗೆ ಬಂದ ವಿದ್ಯಾರ್ಥಿಗಳಿಗೆ ಸ್ವಾಗತಿಸುವುದು ಒಂದು ಸಂಪ್ರದಾಯವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಡಾ. ಹೈಂದವಿ ಮಾತನಾಡಿ ಸಂಸ್ಥೆ ಕಟ್ಟುವುದು ಬಹಳ ಸುಲಭ ಆದರೆ ಅದನ್ನ ನೆಡೆಸುವುದು ಬಹಳ ಕಷ್ಟ. ಮಧುಸೂದನ್ ಗುಪ್ತಾಜೀಯವರು ಮೊದಲು ಗುಡಿಸಲಲ್ಲಿ ಶಾಲೆಯನ್ನು ಪ್ರಾರಂಭಿಸಿ ಇಂದು ಭವ್ಯವಾದ ಕಟ್ಟದಲ್ಲಿ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣವನ್ನು ಕಲಿಯುತ್ತ ಇಂದು ಬೃಹದಾಕಾರವಾಗಿ ಬೆಳೆಯಲು ಸಾಧ್ಯವಾಗಿದೆ ಎಂದು ಹೇಳಿದರು.ಸಂಸ್ಥೆಯ ಅಧ್ಯಕ್ಷರಾದ ಉಮಾಮಹೇಶ್ವರಿ, ಕಿಶೋರ್ ಕುಮಾರ, ಮಂಜಳಾ, ಡಾ.ಪರಮೇಶ್ವರಪ್ಪ ಗೋಪಶೆಟ್ಟಿ ಪ್ರಾಚಾರ್ಯರು, ಉಪಪ್ರಚಾರ್ಯರಾದ ವೀರಭದ್ರಯ್ಯ ಹಿರೇಮಠ ಉಪನ್ಯಾಸಕರಾದ ಈರಣ್ಣ ಮರ್ಲಟ್ಟಿ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪಾಲಕರದ ಮಲ್ಲಯ್ಯ ನಸಲಾಪುರ ಮಾನ್ವಿ ತಾಲೂಕಾಧ್ಯಕ್ಷರು ಕನಕ ಗುರುಪೀಠ ತಿಂತಣಿ ಬ್ರಿಡ್ಜ್ , ಶರಣಪ್ಪ ಸಾಹುಕಾರ ಬೀರಪ್ಪನವರು ಬೈಲ್ ಮರ್ಚೆಡ್ ಮತ್ತು ಬಿ.ಇಡಿ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಿಯದರ್ಶಿನಿ ಮತ್ತು ವನಿತಾ ಪ್ರಶಿಕ್ಷಣಾರ್ಥಿಗಳು ನಿರೂಪಿಸಿದರು. ಸಹನಾ ಪ್ರಾರ್ಥಿಸಿದರು, ಜ್ಯೋತಿ ಸ್ವಾಗತಿಸಿದರು ಚೆನ್ನಬಸಮ್ಮ ವಂದಿಸಿದರು.

## ಸಾಹಿತಿ ಬಸವರಾಜಗೆ ಶ್ರೀಗಳಿಂದ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಕೊಡಗಾನೂರ ಗ್ರಾಮದವರಾದ ನಿವೃತ್ತ ಶಿಕ್ಷಕ ಸಾಹಿತಿ ಬಸವರಾಜ ಗೊರಜಿ ಇವರನ್ನು ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ತುಂಬಗಿ–ಸಾಸನೂರಿನ ಪೂಜ್ಯ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಸನ್ಮಾನಿಸಿ ಆಶೀರ್ವಾದ ನೀಡಿದರು.**



ಇತ್ತೀಚಿಗೆ ತಾಲೂಕಿನ ತುಂಬಗಿ ಗ್ರಾಮದಲ್ಲಿ ಜರುಗಿದ ಶ್ರೀ ಯಡಿಯೂರು ಸಿದ್ದಲಿಂಗೇಶ್ವರ ಮಹಾಪುರಾಣ ಮಂಗಲೋತ್ಸವ ಕಾರ್ಯಕ್ರಮದಲ್ಲಿ ನಾಡಿನ ಹರ–ಚರ ಗುರುಮೂರ್ತಿಗಳು ರಾಜಕೀಯ ದುರೀಣರು ಹಾಗೂ ಗಣ್ಯರ ಸಮ್ಮುಖದಲ್ಲಿ ಅವರನ್ನು ಶ್ರೀಮಠದ ವತಿಯಿಂದ ಪರಮ ಪೂಜ್ಯರು ಗೌರವಿಸಿ ಆಶೀರ್ವಾದ ನೀಡಿದರು.

## ಏಪ್ರಿಲ್ 09ರಂದು ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯಲ್ಲಿ ಜಿಲ್ಲಾಡಳಿತದ ವತಿಯಿಂದ ಎಪ್ರಿಲ್ 20ರಂದು ಬಸವ ಜಯಂತಿ, ಏಪ್ರಿಲ್ 21ರಂದು ಶ್ರೀಶಂಕರಾಚಾರ್ಯ ಜಯಂತಿ, ಏಪ್ರಿಲ್ 23ರಂದು ಭಗಿರಥ ಜಯಂತಿ ಹಾಗೂ ಮೇ. 01ರಂದು ಭಗವಾನ್ ಬುದ್ಧ ಜಯಂತಿ ನಡೆಯಲಿವೆ. ಈ ಜಯಂತಿಗಳ ಅಂಗವಾಗಿ ಏಪ್ರಿಲ್ 09ರ ಬೆಳಿಗ್ಗೆ 10ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದ್ದು,**

ವಿವಿಧ ಸಮಾಜದ ಮುಖಂಡರು, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆ ಸೂಚನೆ ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಗದಿತ ಅವಧಿಯಲ್ಲಿ ಆರ್.ಟಿ.ಐ ಅರ್ಜಿದಾರರಿಗೆ ಮಾಹಿತಿ ನೀಡದೆ ಮಾಹಿತಿ ಹಕ್ಕು ಕಾಯ್ದೆ ಉಲ್ಲಂಘನೆ–ಪಿಡಿಓ ಮೇಲೆ ಕ್ರಮಕ್ಕೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಸಿರವಾರ: ತಾಲೂಕಿನ ಹರವಿ ಗ್ರಾಮ ಪಂಚಾಯತಿಯ 2023–24ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಕೈಗೊಂಡ ವಿವಿಧ ಅಭಿವೃದ್ಧಿ ಕಾಮಗಾರಿಗಳ ದಾಖಲೆಗಳನ್ನು ನೀಡುವಂತೆ (ಆರ್.ಟಿ.ಐ) ಕಾಯ್ದೆಯಡಿ ಅರ್ಜಿ ಸಲ್ಲಿಸಿ ಎರಡು ತಿಂಗಳು ಕಳೆದರೂ ಸಹ, ನಿಗದಿತ ಅವಧಿಯಲ್ಲಿ ಮಾಹಿತಿ ನೀಡದೆ ಪಿಡಿಓ ಪ್ರದೀಪ್ ಪಾಟೀಲ್ ಮಾಹಿತಿ ಹಕ್ಕು ಕಾಯ್ದೆಯನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡುತ್ತಿದ್ದಾರೆ ಎಂದು (ಆರ್.ಟಿ.ಐ) ಕಾರ್ಯಕರ್ತ ಹೆಚ್.ರೆಡ್ಡಿ ಅವರು ಆರೋಪಿಸಿದ್ದಾರೆ.**

ಈ ಕುರಿತು ಪಟ್ಟಣದಲ್ಲಿ ಮಂಗಳವಾರ ಪತ್ರಿಕೆ ಪ್ರಕಟಣೆಯಲ್ಲಿ (ಆರ್.ಟಿ.ಐ) ಕಾರ್ಯಕರ್ತ ಹೆಚ್.ರೆಡ್ಡಿ ಮಾತನಾಡಿ, ಸಿರವಾರ ತಾಲೂಕಿನ ಹರವಿ ಗ್ರಾಮ ಪಂಚಾಯತಿಯಲ್ಲಿ 15ನೇ ಹಣಕಾಸು ಯೋಜನೆಯಡಿ ಕೈಗೊಂಡ ಸಿಮೆಂಟ್ ಚೇರ್ ಅಳವಡಿಕೆ, ಸೋಲಾರ್ ಬೀದಿ ದೀಪಗಳ ಅಳವಡಿಕೆ, ಜಂಗಲ್ ಕಟಿಂಗ್, ಅಂಗನವಾಡಿ ಕೇಂದ್ರ ದುರಸ್ಥಿ ಸೇರಿದಂತೆ ಇನ್ನಿತರೆ ಕಾಮಗಾರಿಗಳಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ನೀಡುವಂತೆ ಫೆ.12 ರಂದು ಮಾಹಿತಿ ಹಕ್ಕಿನಡಿ ಅರ್ಜಿ ಸಲ್ಲಿಸಿ ಎರಡು ತಿಂಗಳಾದರೂ ಕೂಡ, ಸಕಾಲದಲ್ಲಿ ಕೋರಿದ ಮಾಹಿತಿ ದಾಖಲೆಗಳನ್ನು ನೀಡದೆ ಪಿಡಿಓ ಪ್ರದೀಪ್ ಅವರು ತಮ್ಮ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಹೇಳಿದ್ದಾರೆ.



ಮಾಹಿತಿ ಹಕ್ಕು ಕಾಯ್ದೆ ಉಲ್ಲಂಘನೆ: ಸಾರ್ವಜನಿಕ ಪ್ರಾಧಿಕಾರವಾಗಿರುವ ಹರವಿ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಪಿಡಿಓ ಪ್ರದೀಪ್ ಪಾಟೀಲ್ ಪ್ರಥಮ ಮೇಲ್ಮನವಿ ಅಧಿಕಾರಿಯಾಗಿದ್ದು, ಸರ್ಕಾರದ ಯೋಜನೆಗಳ ಮಾಹಿತಿ, ಅನುದಾನ ಬಳಕೆ, ಕಾಮಗಾರಿಗಳ ಬಿಲ್ ದಾಖಲೆಗಳನ್ನು ನೀಡುವಂತೆ (ಆರ್.ಟಿ.ಐ) ಕಾಯ್ದೆಯಡಿ ಅರ್ಜಿ ಸಲ್ಲಿಸುವ ಅರ್ಜಿದಾರರಿಗೆ ನಿಗದಿತ ಅವಧಿಯಲ್ಲಿ ಮಾಹಿತಿ ನೀಡದೆ ಪಿಡಿಓ ಪ್ರದೀಪ್ ಪಾಟೀಲ್ ಉದ್ದೇಶ ಪೂರ್ವಕವಾಗಿ ಮಾಹಿತಿ ಹಕ್ಕು ಕಾಯ್ದೆಯನ್ನು ಉಲ್ಲಂಘನೆ ಮಾಡುತ್ತಿದ್ದಾರೆ ಎಂದು ದೂರಿದ್ದಾರೆ.

ಭ್ರಷ್ಟಾಚಾರದ ವಾಸನೆ? ಹರವಿ ಗ್ರಾಮ ಪಂಚಾಯತಿಯ 2023–24ನೇ ಸಾಲಿನ 15ನೇ ಹಣಕಾಸು ಯೋಜನೆ ಅನುದಾನದಲ್ಲಿ ಕಳೆದ ಜನವರಿ–ಫೆಬ್ರವರಿ ತಿಂಗಳಲ್ಲಿ ಕೈಗೊಂಡ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಅತ್ಯಂತ ಕಳಪೆ ಮಟ್ಟದಲ್ಲಿ ನಿರ್ವಹಿಸಿ ಅಂದಾಜು 10 ಲಕ್ಷ ರೂ. ಸರ್ಕಾರದ ಹಣ ಎತ್ತುವಳಿ ಮಾಡಲಾಗಿದೆ.

ಆದರೆ ವಾಸ್ತವದಲ್ಲಿ ಕಾಮಗಾರಿಗಳ ಗುಣಮಟ್ಟ ಮತ್ತು ಅನುಷ್ಠಾನದ ಬಗ್ಗೆ ಹಲವು ಸಂಶಯಗಳಿವೆ. ಈ ಹಿನ್ನೆಲೆಯಲ್ಲಿ ದಾಖಲೆಗಳನ್ನು ಬಹಿರಂಗಪಡಿಸಿದರೆ ಪಂಚಾಯತಿಯ ಅಕ್ರಮಗಳು ಬಯಲಾಗುತ್ತವೆ ಎಂಬ ಭಯದಿಂದ ಪಿಡಿಓ ಪ್ರದೀಪ್ ರವರು ಮಾಹಿತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂದರು.

ಸಾರ್ವಜನಿಕರ ಕರೆ ಸ್ವೀಕರಿಸದ ಪಿಡಿಓ: ಪಂಚಾಯತ್ ವ್ಯಾಪ್ತಿಯ ಸಮಸ್ಯೆ ಮತ್ತು ಜನರ ಕೆಲಸ ಕಾರ್ಯಗಳನ್ನು ಪಿಡಿಓ ಅವರ ಗಮನಕ್ಕೆ ತರಲು ಸರ್ಕಾರ ನೀಡಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಿದರೆ ಪಿಡಿಓ ಪ್ರದೀಪ್ ರವರು ಸಾರ್ವಜನಿಕರು, ಪತ್ರಕರ್ತರು ಮತ್ತು ಸಂಘ ಸಂಸ್ಥೆಗಳ ಮುಖಂಡರ ದೂರವಾಣಿ ಕರೆಗಳನ್ನು ಸ್ವೀಕರಿಸುವುದಿಲ್ಲ. ಕೇವಲ ತಮಗೆ ಬೇಕಾದವರೊಂದಿಗೆ ಖಾಸಗಿ ದೂರವಾಣಿಯೊಂದಿಗೆ ಮಾತಾಡಿಕೊಂಡು ಫೋನ್ ಸ್ವೀಚ್ ಆಫ್ ಇಡುತ್ತಾರೆ ಎಂದು ತಿಳಿಸಿದ್ದಾರೆ.

ಪಿಡಿಓ ಮೇಲೆ ಕ್ರಮಕ್ಕೆ ಒತ್ತಾಯ: ಆರ್.ಟಿ.ಐ ಕಾಯ್ದೆಯಡಿ ಅರ್ಜಿ ಸಲ್ಲಿಸುವ ಅರ್ಜಿದಾರರಿಗೆ ನಿಗದಿತ ಅವಧಿಯಲ್ಲಿ ಮಾಹಿತಿ ನೀಡದೆ ಸತಾಯಿಸುತ್ತ ಪಿಡಿಓ ಪ್ರದೀಪ್ ಪಾಟೀಲ್ (ಆರ್.ಟಿ.ಐ) ಕಾಯ್ದೆಯನ್ನು ಉಲ್ಲಂಘಿಸುತ್ತಿದ್ದಾರೆ ಮತ್ತು ತಮ್ಮ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳಲು ಪಿಡಿಓ ರವರು ಈ ತಂತ್ರ ಅನುಸರಿಸುತ್ತಿದ್ದಾರೆ. ಆದ್ದರಿಂದ ಜಿ.ಪಂ ಸಿಇಓ ಹಾಗೂ ತಾ.ಪಂ ಇಓ ರವರು ಈ ಬಗ್ಗೆ ಗಮನಹರಿಸಿ ಕೂಡಲೇ ಪಿಡಿಓ ಪ್ರದೀಪ್ ಪಾಟೀಲ್ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆರ್.ಟಿ.ಐ ಕಾರ್ಯಕರ್ತ ಹೆಚ್.ರೆಡ್ಡಿ ರವರು ಪತ್ರಿಕೆ ಪ್ರಕಟಣೆ ಮೂಲಕ ಒತ್ತಾಯಿಸಿದ್ದಾರೆ.

## ಪರಿಹಾರ ವಿತರಿಸದೆ ಮನೆ ತೆರವು–ವಿಷ ಸೇವನೆಗೆ ಮುಂದಾದ ಕುಟುಂಬ–ಸ್ಥಳೀಯರಿಂದ ರಸ್ತೆ ತಡೆದು ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ರಸ್ತೆ ವಿಸ್ತರಣೆಗೆ ಪರಿಹಾರ ವಿತರಿಸದೆ ಮನೆ ತೆರವುಗೊಳಿಸಿದ್ದರಿಂದ ನೊಂದು ಕುಟುಂಬಸ್ಥರು ವಿಷ ಸೇವನೆಗೆ ಮುಂದಾದ ಘಟನೆ ಇಂದು ಹಿರೇಹಣಗಿ ಗ್ರಾಮದಲ್ಲಿ ಜರುಗಿದೆ. ಬೆಳಗಾವಿ ರಾಯಚೂರು ರಾಷ್ಟ್ರೀಯ ಹೆದಾರಿ ನಿರ್ಮಾಣ ಕಾಮಗಾರಿ ಹಿನ್ನಲೆಯಲ್ಲಿ ಹಿರೇಹಣಗಿ ಗ್ರಾಮದ ನವೀನಕುಮಾರ ಅವರ ಮನೆಯನ್ನು ಏಕಾಏಕಿ ತೆರವುಗೊಳಿಸಲಾಗಿದೆ ಎಂದು ಆರೋಪಿಸಿ ಗ್ರಾಮಸ್ಥರು ರಾಜ್ಯ ಹೆದ್ದಾರಿಯನ್ನ ತಡೆದು ಪ್ರತಿಭಟಿಸಿದರು.**



'ಬೇರೆಯವರ ಹೆಸರಿಗೆ ನೋಟೀಸ್ ನೀಡಲಾಗಿದೆ ಈ ಬಗ್ಗೆ ತಮಗೆ ಮಾಹಿತಿ ಇಲ್ಲ ಪರಿಹಾರ ವಿತರಣೆಯಲ್ಲಿ ಅಧಿಕಾರಿಗಳು ತಾರತಮ್ಯ ಮಾಡಿದ್ದಾರೆ ಕಡಿಮೆ ಮೊತ್ತದ ಪರಿಹಾರ ವಿತರಿಸಿದ ಬಗ್ಗೆ ತಕರಾರು ಸಲ್ಲಿಸಿದರೂ ಅಧಿಕಾರಿಗಳು ಕಾಳಜಿ ವಹಿಸಿಲ್ಲ, ಇದೀಗ ಇದ್ದಕ್ಕಿದ್ದಂತೆ ಮನೆ ಕೆಡವಿದ್ದಾಋಎ ಇದರಿಂದ ಕುಟುಂಬ ಬೀದಿಗೆ ಬೀಳುವಂತಾಗಿದೆ ತಾವು ಮದುವೆಸಮಾರಮಭದಲ್ಲಿ ಭಾಗಿಯಾಗಿದ್ದು ಮನೆಯಲ್ಲಿದ್ದ್ ವೃದ್ಧೆಗೆ ಬೆದರಿಕೆ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿ ದೌರ್ಜನ್ಯ ಎಸಗಲಾಗಿದೆ ಎಂದು' ಮನೆ ಮಾಲೀಕ ನವೀನಕುಮಾರ ಆಕ್ರೋಶ ವ್ಯಕ್ತಪಡಿಸಿದರು.

'ಅಷ್ಟೆ ಅಲ್ಲದೆ ಜಮೀನು, ಮನೆಗಳ ಮೌಲ್ಯಮಾಪನದಲ್ಲಿ ಅಧಿಕಾರಿಗಳು ತಾರತಮ್ಯ ಮಾಡಿದ್ದಾಋಎ ಪಕ್ಕದ ಮನೆಗೆ ಹೆಚ್ಚಿನ ಪರಿಹಾರ ನೀಡಿದ್ದು ತಮಗೆ ಕಡಿಮೆ ನೀಡಿದ್ದಾರೆಪ್ರತಿಯೊಂದು ಸಮಸ್ಯೆಗೂ ನ್ಯಾಯಾಲಯಕ್ಕೆ ಹೊಗುವಂತೆ



ಸೂಚಿಸುವ ಅಧಿಕಾರಿಗಳು ಸೌಜನ್ಯದಿಂದ ನಡೆದುಕೊಳ್ಳುತ್ತಿಲ್ಲ ಎಂದು ಸ್ಥಳಿಯರು ದೂರಿದರು, ಪ್ರಸತುತ ಮನೆ ತೆರವು ಮಾಡಿದ್ದರಿಂದ ಮನೆ ಬಳಕೆಯ ಪಾತ್ರೆಗಳು, ತೊಗರಿ. ಜೋಳ ಸೇರಿದಂತೆ ಇನ್ನಿತರ ದವಸ ಧಾನ್ಯಗಳು, ಚಿನ್ನದ ಆಭರಣಗಳು ಮಣ್ಣು ಪಾಲಾಗಿವೆ ಎಂದು ಅಳಲು ತೊಡಿಕೊಂಡ ಕುಟುಂಬಸ್ಥರು ವಿಷ ಕುಡಿಯಲು ಮುಂದಾಗಿದ್ದು ಅಧಿಕಾರಿಗಳು ಇತ್ತಕಡೆ ಗಮನ ಹರಿಸಿ ಕುಟುಂಬಕ್ಕೆ ಆದ ನಷ್ಟವನ್ನು ಭರಿಸಬೇಕು' ಎಂದು ಸ್ಥಳಿಯರು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಸ್ಥಳದಲ್ಲಿದ್ದ ಅಧಿಕಾರಿಗಳು ಕುಟುಂಬಸ್ಥರು ವಿಷ ಸೇವಿಸುವುದನ್ನು ತಡೆದರು ಸ್ಥಳಕ್ಕೆ ಆಗಮಿಸಿದ ಭೂ ಸ್ವಾಧೀನ ಅಧಿಕಾರಿ ಸಿದ್ದಯ್ಯ ಹಿರೇಮಠ ಮತ್ತು ಸಿರವಾರ ತಹಸೀಲ್ದಾರ ಅಶೋಕ್ ಪವಾರ್ ಅವರು ಸೂಕ್ತ ಒದಗಿಸಲಾಗುವುದು ಈಗ ಕಾಮಗಾರಿ ಕೈಗೊಳ್ಳಲು ಅವಕಾಶ ನೀವಂತೆ ಮನವಿ ಮಾಡಿದರು, ಅದಕ್ಕೆ ಒಪ್ಪದೆ ಮನೆ ಮಾಲೀಕರು ಪರಿಹಾರ ವಿತರಿಸಿ ಕಾಮಗಾರಿ ಕೂಗೊಳ್ಳುವಂತೆ ಪಟ್ಟುಹಿಡಿದರು. ಅಧಿಕಾರಿಗಳ ನಿರ್ಲಕ್ಷ್ಯದಿಂದ ಪರಿಹಾರ ಸಿಕ್ಕಿಲ್ಲ , ಈಬಗ್ಗೆ ಮಾಃಇತಿ ಇದ್ದರೂ ಕ್ರಮಕೈಗೊಂಡಿಲ್ಲ ಎಂದು ಭೀಮಣ್ಣ, ಶರಣಪ್ಪ, ಶಿವಪ್ಪ ಮತ್ತಿತರರು ಆರೋಪಿಸಿದರು, ಸ್ಥಳದಲ್ಲಿದ್ದ ಸಿಪಿಐ ಶಶಿಕಾಂತ. ಎಂ ಮತ್ತು ಪೊಲೀಸ್ ಸಿಬ್ಬಂದಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸಿ ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು, ಅಧಿಕಾರಿಗಳು ನಾಳೆಯೇ ಪರಿಹಾರ ವಿತರಣೆಗೆ ಕ್ರಮಕೈಗೊಳ್ಳುವ ಬರವಸೆ ನೀಡಿದ

## ನೇಮಕಾತಿ ಪ್ರಕಟಣೆ

ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರ್ ಕಚೇರಿ ಹಾವೇರಿ ನೇಮಕಾತಿ 2026–73 ಪೌರಕಾರ್ಮಿಕ (ನಾಗರಿಕ ಸೇವಕ) ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಏಪ್ರಿಲ್ 6, 2026 ಶಶಿ ಅವರಿಂದ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರ್ ಕಚೇರಿ ಹಾವೇರಿ ನೇಮಕಾತಿ 2026: 73 ಪೌರಕಾರ್ಮಿಕ (ನಾಗರಿಕ ಸೇವಕ) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಹಾವೇರಿ ಜಿಲ್ಲೆಯ ಪುರಸಭೆಗಳು ಪೌರಕಾರ್ಮಿಕ (ನಾಗರಿಕ ಸೇವಕ) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಕಲೆಕ್ಟರ್ ಕಚೇರಿ ಹಾವೇರಿ ಅಧಿಕೃತ ಅಧಿಸೂಚನೆ ಏಪ್ರಿಲ್ 2026 ಮೂಲಕ ಆಹ್ವಾನಿಸಿದೆ. ಹಾವೇರಿ – ಕರ್ನಾಟಕದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಏಪ್ರಿಲ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 01–04–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30–ಏಪ್ರಿಲ್–2026 ಅಧಿಕೃತ ವೆಬ್‌ಸೈಟ್: haveri.nic.in

## ಸಾವಯವ ಕೃಷಿಯಿಂದ ಭೂಮಿಯ ಸಮತೋಲನ ಸಾಧ್ಯ: ಪಾಟೀಲ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ರೈತರು ರಾಸಾಯನಿಕ ಗೊಬ್ಬರವನ್ನು ಅತಿಯಾಗಿ ಬಳಸುತ್ತಿರುವುದರಿಂದ ಭೂಮಿಯು ಫಲವತ್ತತೆಯನ್ನು ಕಳೆದುಕೊಳ್ಳುತ್ತಿದೆ ಆದ್ದರಿಂದ ಸಾವಯವ ಕೃಷಿಯನ್ನು ಬಳಸಿಕೊಂಡು ಭೂಮಿಯ ಸಮತೋಲನವನ್ನು ಕಾಯ್ದುಕೊಳ್ಳಬೇಕು ಎಂದು ಕೆಪಿಸಿಸಿ ಸದಸ್ಯ ಬಿಎಸ್ ಪಾಟೀಲ ಯಾಳಗಿ ಹೇಳಿದರು. ಪಟ್ಟಣದ ರೈತ ಸಂಪರ್ಕ ಕೇಂದ್ರದಲ್ಲಿ ಮಂಗಳವಾರ ಹಮ್ಮಿಕೊಂಡ ರೈತರಿಗೆ ತಾಡಪಾಲು ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.**



ತಾಲೂಕ ಕೃಷಿಕ ಸಮಾಜದ ಅಧ್ಯಕ್ಷ ಬಸನಗೌಡ ಮಾಡಗಿ ಮಾತನಾಡಿ ನಮ್ಮ ರೈತರು ಕೃಷಿಯ ಜೊತೆಗೆ ಪಶುಪಾಲನೆ ಮತ್ತು ಹೈನುಗಾರಿಕೆಯನ್ನು ಅಳವಡಿಸಿಕೊಳ್ಳಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ರೈತರಿಗಾಗಿ ಹಲವಾರು ಯೋಜನೆಗಳಿವೆ ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕು ಎಂದರು. ಕೃಷಿ ಅಧಿಕಾರಿ ಮಹೇಶ್ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿ ಇವತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಕೃಷಿ ಸಂಸ್ಕರಣೆ ಘಟಕದಡಿ ತಾಡಪಾಲುಗಳನ್ನು ವಿತರಿಸಲಾಗುತ್ತಿದೆ ಈ ಬಾರಿ ಗುರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾದ ಕಾರಣ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ರೈತ ಮುಖಂಡರಾದ ಅಬ್ದುಲ್ ಗನಿಸಾಬ ಲಾಹೋರಿ, ಸಿದ್ದನಗೌಡ ಪಾಟೀಲ ನಾವದಗಿ, ಪ್ರಭುಗೌಡ ಮದರಕಲ್ಲ, ಸಿದ್ರಾಮಪ್ಪ ಚೌದ್ರಿ, ಕೃಷಿ ಅಧಿಕಾರಿ ಮಹೇಶ ಜೋಶಿ, ಸಿಬ್ಬಂದಿಗಳಾದ ಸಂಗಮೇಶ ಪಾಟೀಲ, ರುಕ್ಸಾನಾ ತಾಳಿಕೋಟಿ, ಕಿರಣ ಬೊಮ್ಮನಹಳ್ಳಿ, ಹನುಮಂತ್ರಾಯ ಕುಂಟರೆಡ್ಡಿ, ವಿರುಪಾಕ್ಷ ನಂದಿಕೋಲ, ರವಿ ಹೊಸಮನಿ, ಬಸವರಾಜ ಜಾಲವಾದಿ, ರಾಮಣ್ಣ ಹರಿಜನ್ ಹಾಗೂ ವಿವಿಧ ಗ್ರಾಮಗಳ ರೈತರು ಮತ್ತು ಕೃಷಿ ಸಖಿಯರು ಭಾಗವಹಿಸಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಪ್ರಥಮ ಪುಣ್ಯಸ್ಮರಣೆ



ಜನನ 01–03–2007

ಮರಣ 08–04–2025

### ದಿ. ಭಾಗ್ಯಶ್ರೀ ಪ್ರವೀಣ ಬಿರಾದಾರ

ಸಾ. ಬೇಕಿನಾಳ ಜಿ. ವಿಜಯಪುರ

ನೀವು ನಮ್ಮನ್ನಗಲಿ ಇಂದಿಗೆ ದಿ: 08.04.2026ಕ್ಕೆ 1 ವರ್ಷವಾಯಿತು.
ನಿಮ್ಮ ನೆನಪು ಇಂದಿಗೂ ನಮ್ಮ ಮನದಲ್ಲಿ ಸದಾ ಹಚ್ಚ ಹಸಿರಾಗಿದೆ. ನಿಮ್ಮ ಪ್ರೀತಿ ವಾತ್ಸಲ್ಯ, ಸರಳ ಜೀವನ ಹಾಗೂ ನಿಮ್ಮ ಆದರ್ಶ ಬದುಕು ನಮಗೆ ದಾರಿದೀಪವಾಗಿದೆ.
ಭಗವಂತನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಸದಾ ಪ್ರಾರ್ಥಿಸುತ್ತೇವೆ.

ದು:ಖತಪ್ತರು

ತಂದೆ : ಡಾ. ಪ್ರವೀಣ ಬ. ಬಿರಾದಾರ ತಾಯಿ : ಚಂದ್ರಕಲಾ ಪಿ.ಬಿರಾದಾರ
ತಮ್ಮ : ಬಸನಗೌಡ ಪಿ. ಬಿರಾದಾರ ದೊಡ್ಡಪ್ಪ : ಸುರೇಶ, ಗುರುನಾಥಗೌಡ
ದೊಡ್ಡಮ್ಮ : ಶ್ವೇತಾ, ಶೋಭಾ ಮಾವಂದಿರು : ಚನ್ನಾರೆಡ್ಡಿ, ರುದ್ರಗೌಡ
ಅತ್ತಿಯಂದಿರು : ಬಸಮ್ಮ, ಗಂಗಮ್ಮ, ಚನ್ನಮ್ಮ,

ಜ್ಞಾನ ಶಾರದೆ ಅಕಾಡೆಮಿ ಕಲಬುರಗಿ ಸಿಬ್ಬಂದಿ ವರ್ಗ
ಹಾಗೂ ಬಿರಾದಾರ ಮತ್ತು ಮಲ್ಹಾರ ಅಪಾರ ಬಂಧುಬಳಗ

## ಸಿಂಧನೂರು ತಾಲೂಕಿನ ಸರ್ಕಾರಿ ಮತ್ತು ಖಾಸಗಿ ಪ್ರಯೋಗಾಲಯ ತಾಂತ್ರಿಕ ಅಧಿಕಾರಿಗಳ ತುರ್ತು ಸಭೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ತಾಲೂಕಿನ ಸಾರ್ವಜನಿಕ ಆರೋಗ್ಯ ರಕ್ಷಣೆ ಮತ್ತು ಸಾಂಕ್ರಾಮಿಕ ರೋಗಗಳ ನಿಯಂತ್ರಣದ ನಿಟ್ಟಿನಲ್ಲಿ, ಇಂದು ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಸರ್ಕಾರಿ ಹಾಗೂ ಖಾಸಗಿ ವಲಯದ ಪ್ರಯೋಗಾಲಯ ತಾಂತ್ರಿಕ ಅಧಿಕಾರಿಗಳ ಪ್ರಮುಖ ಸಭೆಯನ್ನು ಆಯೋಜಿಸಲಾಗಿತ್ತು.**

ತಾಲೂಕು ಆರೋಗ್ಯಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ತಾಲೂಕಾ ವಿ.ಬಿ.ಡಿ ಮೇಲ್ವಿಚಾರಕ ಎಫ್.ಎ.ಹಣಗಿ ಸ್ವಾಗತಿಸಿದರು ಮತ್ತು ಸಭೆಯ ಪೀಠಿಕೆ ನೀಡಿದರು ಹಾಗೂ ವರ್ಷಾದ್ಯಂತ ನಮ್ಮಲ್ಲಿನ ಡೆಂಗ್ಯೂ ತೆರನಾದ ಪ್ರಕರಣಗಳ ಕುರಿತು ಗಮನ ಸೆಳೆದರು. ಸಭೆಯನ್ನುದ್ದೇಶಿಸಿ ತಾಲೂಕಾರೋಗ್ಯಾಧಿಕಾರಿಗಳು ಮಾತನಾಡುತ್ತಾ ಡೆಂಗ್ಯೂ, ಚಿಕೂನ್‌ಗುನ್ಯಾ, ಮಲೇರಿಯಾ ಮತ್ತು ಜೆ.ಇ. ರೋಗಗಳ ಪತ್ತೆ ಹಾಗೂ ವರದಿ ಮಾಡುವಿಕೆ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು. ಸಭೆಯಲ್ಲಿ ಮುಖ್ಯವಾಗಿ 2026ನೇ ಸಾಲಿನಲ್ಲಿ ವರದಿಯಾದ ಡೆಂಗ್ಯೂ ಮತ್ತು ಚಿಕೂನ್‌ಗುನ್ಯಾ ಪ್ರಕರಣಗಳ ಹಿನ್ನೆಲೆಯಲ್ಲಿ ಕೈಗೊಳ್ಳಲಾದ ಕ್ರಮಗಳನ್ನು ಪರಾಮರ್ಶಿಸಲಾಯಿತು.



ಪ್ರತಿಯೊಂದು ಪಾಸಿಟಿವ್ ಪ್ರಕರಣದ ಕುರಿತು ಸಾಂಕ್ರಾಮಿಕ ರೋಗಶಾಸ್ತ್ರೀಯ ಮತ್ತು ಕೀಟಶಾಸ್ತ್ರೀಯ ತನಿಖೆ ನಡೆಸುವುದು ಹಾಗೂ ಅದರ ವರದಿಯನ್ನು ವಿಳಂಬವಿಲ್ಲದೆ ಅನುಷ್ಠಾನಕ್ಕೆ ಮುಂದಾಗುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಸೂಚಿಸಲಾಯಿತು. ವಿಶೇಷವಾಗಿ ಐ.ಹೆಚ್.ಐ.ಪಿ. (IHIP)ಪೋರ್ಟಲ್‌ನಲ್ಲಿ ದತ್ತಾಂಶ ನಮೂದಿಸುವಲ್ಲಿ ಯಾವುದೇ ಲೋಪವಾಗದಂತೆ ಎಚ್ಚರ ವಹಿಸಲು ತಿಳಿಸಲಾಯಿತು. ಖಾಸಗಿ ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳಲ್ಲಿ ಮಾದರಿ ಪರೀಕ್ಷೆಯ ದತ್ತಾಂಶಗಳು ಶೂನ್ಯ ತೋರಿಸುತ್ತಿರುವುದರ ಬಗ್ಗೆ ಗಂಭೀರವಾಗಿ ಚರ್ಚಿಸಲಾಯಿತು.

ಸಾರ್ವಜನಿಕ ಹಿತದೃಷ್ಟಿಯಿಂದ ಎಲ್ಲಾ ಖಾಸಗಿ ಸಂಸ್ಥೆಗಳು ಮಲೇರಿಯಾ ಮತ್ತು ಡೆಂಗ್ಯೂ ಪ್ರಕರಣಗಳ ಮಾಹಿತಿಯನ್ನು ನಿಖರವಾಗಿ ಹಂಚಿಕೊಳ್ಳಬೇಕು ಮತ್ತು ಕೆ.ಪಿ.ಎಂ.ಇ. (KPME) ನೋಂದಣಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಈ ಸಂದರ್ಭದಲ್ಲಿ ತಾಲೂಕಾರೋಗ್ಯಾಧಿಕಾರಿಗಳಾದ ಡಾ.ಅಯ್ಯನಗೌಡ ಎಚ್ಚರಿಕೆ ನೀಡಿದರು.

ಅಲ್ಲದೆ, ಬಯೋ ಹಜಾರ್ಡ್ ಗಳ ಬಗ್ಗೆ ವಿಸ್ತ್ರತ ಚರ್ಚೆ ನಡೆಸಿ ಮಾಹಿತಿ ಪಡೆದರು ಹಾಗೂ ಸರಿಯಾದ ವಿಲೆವಾರಿ ಯಾಗದ ಬಗ್ಗೆ ಸಭೆಯಲ್ಲಿನ ಖಾಸಗಿ ಪ್ರಯೋಗ ಶಾಲಾ ತಂತ್ರಜ್ಞರ ಮಾಹಿತಿಯಿಂದ ಕಟ್ಟು ನಿಟ್ಟಿನ ಆದೇಶಕ್ಕಾಗಿ ಜಿಲ್ಲೆಯಲ್ಲಿ ಚರ್ಚಿಸಿ ಲೋಪ ಸರಿಪಡಿಸಲು ಸೂಕ್ತ



ಕ್ರಮಕ್ಕಾಗಿ ಸಂಭಂದಿಸಿದ ಹಿರಿಯ ಅಧಿಕಾರಿಗಳ ಗಮನ ಸೆಳೆದು ಮನವಿ ಮಾಡಲಾಗುವುದು ಎಂದರು ವಲಸೆ ಕಾರ್ಮಿಕರ ಆರೋಗ್ಯ ತಪಾಸಣೆ ಮತ್ತು ಆನೆಕಾಲು ರೋಗಿಗಳಿಗೆ ಗೃಹ ಆಧರಿತ ಆರೈಕೆಯ (ಎಂ.ಎಂ.ಡಿ.ಪಿ.) ಕಿಟ್‌ಗಳ ವಿತರಣೆಯ ಪ್ರಗತಿಯ ಬಗ್ಗೆಯೂ ಸಭೆಯಲ್ಲಿ ಮಾಹಿತಿ ಪಡೆಯಲಾಯಿತು. ಈ ಸಭೆಯಲ್ಲಿ ತಾಲೂಕಿನ ವಿವಿಧ ಆರೋಗ್ಯ ಕೇಂದ್ರಗಳ ಹಾಗೂ ಖಾಸಗಿ ಪ್ರಯೋಗಾಲಯಗಳ ಪ್ರಯೋಗಶಾಲಾ ತಂತ್ರಜ್ಞಾಧಿಕಾರಿಗಳು,ತಾಲೂಕ ಕಾರ್ಯಾಲಯದ ಅಧಿಕಾರಿಗಳಾದ ರಂಗನಾಥ. ಗುಡಿ,ತ್ರಿವೇಣಿ,ನಿಖಿಲ್ ತಾಲೂಕಾ ಎಪಿಡೆಮಲಾಜಿಸ್ಟ, ಎ.ಆರ್.ಟಿ ಲ್ಯಾಬ್ ಮೇಲ್ವಿಚಾರಕ ಖಾದ್ರಿ, ಎಸ್.ಟಿ. ಎಲ್.ಎಸ್ ಹಮೀದ, ತಾಲೂಕಾ ವಿ.ಬಿ.ಡಿ ಮೇಲ್ವಿಚಾರಕ ಎಫ್.ಎ.ಹಣಗಿ ಉಪಸ್ಥಿತರಿದ್ದರು.

# ಕಾರ್ಮಿಕ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ

## ಬಾಲ್ಯ ಕಾರ್ಮಿಕ ಪದ್ಧತಿ ತಡೆಗೆ ವಿವಿಧ ಇಲಾಖೆಗಳು ಸಹಕಾರ ನೀಡಿ: ಎಡಿಸಿ ಶಿವಾನಂದ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಬಾಲ ಕಾರ್ಮಿಕ ಪದ್ಧತಿಯು ಒಂದು ಸಾಮಾಜಿಕ ಪಿಡುಗಾಗಿದ್ದು ಇದರ ನಿರ್ಮೂಲನೆ ಎಲ್ಲರೂ ಕೈಜೋಡಿಸಬೇಕೆಂದು ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಸಂಬಂಧಿಸಿದ ವಿವಿಧ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಏಪ್ರಿಲ್ 07ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಾರ್ಮಿಕ ಇಲಾಖೆಯ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು**

ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಎಲ್ಲಾ ಇಲಾಖೆಗಳ ಸಹಕಾರ ಹಾಗೂ ಸಮನ್ವಯದ ಅಗತ್ಯವಿದೆ. ಆದ್ದರಿಂದ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯಡಿ ಅಧಿಸೂಚಿಸಲ್ಪಟ್ಟ ಹನ್ನೊಂದು ಇಲಾಖೆಗಳ ಅಧಿಕಾರಿಗಳು ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕರ ತಪಾಸಣೆ ಅಥವಾ ಹಠಾತ್ ದಾಳಿ ಕೈಗೊಳ್ಳುವ ಸಂದರ್ಭಗಳಲ್ಲಿ



ತಂಡದೊಂದಿಗೆ ಸಕ್ರಿಯವಾಗಿ ಭಾಗವಹಿಸಿ ಮಕ್ಕಳ ರಕ್ಷಣೆ ಹಾಗೂ ಪುನರ್‌ವಸತಿಗಾಗಿ ಕ್ರಮ ಕೈಗೊಂಡು ಈ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡ ಮಾಲೀಕರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ ಹಾಗೂ ತಿದ್ದುಪಡಿ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ಕಾರ್ಮಿಕ ಇಲಾಖೆ ಅಧಿಕಾರಿಗಳು ನಿಯಮಿತವಾಗಿ ತಪಾಸಣೆ ನಡೆಸಿ ಬಾಲ ಕಾರ್ಮಿಕರನ್ನು ರಕ್ಷಿಸಿ, ಪುನರ್ವಸತಿ ಕಲ್ಪಿಸಬೇಕು. ಗ್ಯಾರೇಜ್, ಕಾರ್ಖಾನೆ, ಹೋಟೆಲ್, ಅಂಗಡಿ, ಮತ್ತಿತರ ಅಪಾಯಕಾರಿ ಉದ್ಯೋಗದ ಸ್ಥಳಗಳಲ್ಲಿ ತಪಾಸಣೆ ಹೆಚ್ಚಿಸಬೇಕು. ತಪಾಸಣೆ ತೀವ್ರವಾದರೆ ಬಾಲ ಕಾರ್ಮಿಕರನ್ನು ಕೆಲಸದಲ್ಲಿ ತೊಡಗಿಸಿಕೊಳ್ಳಲು ಉದ್ಯೋಗದಾತರು ಹೆದರುತ್ತಾರೆ. ಪತ್ತೆ ಹಚ್ಚಿದ ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಿ ಮುಖ್ಯವಾಹಿನಿಗೆ ತಂದರೆ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಹೇಳಿದರು. ಜಿಲ್ಲೆಯಲ್ಲಿ ಬಾಲ ಕಾರ್ಮಿಕರ ನಿಷೇಧ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿದರೆ ಮಕ್ಕಳು ಬಾಲ ಕಾರ್ಮಿಕರಾಗುವುದನ್ನು ತಪ್ಪಿಸಬಹುದು.

ಇಲ್ಲವಾದರೆ ಮಕ್ಕಳು ಕೊನೆಯವರೆಗೂ ಕಾರ್ಮಿಕರಾಗಿಯೇ ಉಳಿದುಬಿಡುತ್ತಾರೆ. ಬಾಲಕಾರ್ಮಿಕತೆ ಅಥವಾ ಬಿಡುಗಡೆಗೊಳಿಸಿದ ಮಕ್ಕಳ ಕುಟುಂಬಗಳಿಗೆ ಸಾಮಾಜಿಕ ಭದ್ರತೆ ಯೋಜನೆಯ ಸೌಲಭ್ಯಗಳನ್ನು ಒದಗಿಸುವ ಮುಖಾಂತರ ಈ ಮಕ್ಕಳ ಕುಟುಂಬಗಳನ್ನು ಆರ್ಥಿಕವಾಗಿ ಸದೃಡರನ್ನಾಗಿಸಲು ವಿವಿಧ ಸೌಲಭ್ಯಗಳನ್ನು ಒದಗಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಇಲಾಖೆಯಿಂದ ಸೂಕ್ತ ನಿರ್ದೇಶನಗಳನ್ನು ನೀಡಬೇಕು ಅಪರ ಜಿಲ್ಲಾಧಿಕಾರಿ ಸೂಚಿಸಿದರು. ಬಾಲ್ಯ ವಿವಾಹ ನಿಷೇಧ ಕಾಯ್ದೆ–2006ರ ಪ್ರಕಾರ 18ವರ್ಷದೊಳಗಿನ ಯಾವುದೇ ಹೆಣ್ಣು ಮಕ್ಕಳಿಗೆ ಹಾಗೂ 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆಯಾದಲ್ಲಿ ಅದನ್ನು ಬಾಲ್ಯ ವಿವಾಹ ಎಂದು ಪರಿಗಣಿಸಲಾಗಿದೆ.

ಕಾಯ್ದೆಯ ಪ್ರಕಾರ ಬಾಲ್ಯ ವಿವಾಹ ಆದ–'ಲ್ಲಿ ಹುಡುಗ, ಹುಡುಗಿಯ ತಂದೆ ತಾಯಿ ಅಲ್ಲದೇ ಸಂಬಂಧಪಟ್ಟ ಎಲ್ಲರ ವಿರುದ್ಧ ತಪ್ಪಿತಸ್ಥರಿಗೆ ಕಾರಾಗೃಹವಾಸ ಹಾಗೂ ದಂಡ ವಿಧಿಸುವ ಅವಕಾಶವಿದ್ದು, ಕಾಯ್ದೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಎಂದರು. ಹೆಚ್ಚುವರಿ ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಕುಮಾರಸ್ವಾಮಿ ಅವರು ಮಾತನಾಡಿ, ಪೊಲೀಸ್ ಇಲಾಖೆಯಿಂದ ಬಾಲ ಕಾರ್ಮಿಕರ ಪದ್ಧತಿ ನಿರ್ಮೂಲನೆಗೆ ಅಗತ್ಯ ಸಹಕಾರ ನೀಡಲಾಗುವುದು. ಜಿಲ್ಲೆಯ ಯಾವುದೇ ಠಾಣೆಯಲ್ಲಿ ಇಂತಹ ಪ್ರಕರಣಗಳನ್ನು ದಾಖಲಿಸಲು ಹಿಂದೇಟು ಹಾಕಿದ್ದಲ್ಲಿ, ತಕ್ಷಣ ನಮ್ಮ ಗಮನಕ್ಕೆ ತರಬೇಕೆಂದು ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಕಾರ್ಮಿಕ ಇಲಾಖೆಯ ಜಿಲ್ಲಾ ಅಧಿಕಾರಿ ಆರತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಪುಷ್ಪ, ರಾಯಚೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಂಜುನಾಥ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬಿ.ಟೆಕ್ (B.Tech) ಇನ್ VLSI

ಬಿ.ಟೆಕ್ (B.Tech) ಇನ್ VLSI (Very Large Scale Integration) ಎನ್ನುವುದು 4 ವರ್ಷಗಳ ಎಂಜಿನಿಯರಿಂಗ್ ಪದವಿಯಾಗಿದ್ದು, ಎಲೆಕ್ಟ್ರಾನಿಕ್ ಚಿಪ್‌ಗಳು, ಮೈಕ್ರೋಪ್ರೊಸೆಸರ್‌ಗಳು ಮತ್ತು ಸೆಮಿಕಂಡಕ್ಟರ್ ಸಾಧನಗಳ ವಿನ್ಯಾಸ (Design) ಮತ್ತು ತಯಾರಿಕೆಯ ಮೇಲೆ ಗಮನಹರಿಸುತ್ತದೆ. ಈ ಕೋರ್ಸ್ CMOS, ASIC ವಿನ್ಯಾಸ, ಇಆಂ ಪರಿಕರಗಳು ಮತ್ತು ಈಕಉಂ ತಂತ್ರಜ್ಞಾನಗಳಲ್ಲಿ ತಾಂತ್ರಿಕ ಕೌಶಲ್ಯಗಳನ್ನು ನೀಡುತ್ತದೆ, ಇದು ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಂತಹ ಸಂಸ್ಥೆಗಳಲ್ಲಿ ಲಭ್ಯವಿದೆ. ಬಿ.ಟೆಕ್ VLSI ಕೋರ್ಸ್ ವಿವರಗಳು (B.Tech VLSI Course Details) ಅವದಿü (Duration): 4 ವರ್ಷಗಳು (8 ಸೆಮಿಸ್ಟರ್‌ಗಳು). ಅರ್ಹತೆ (Eligibility): ಪಿಯುಸಿ (10+2) ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ (PCM) ವಿಷಯಗಳೊಂದಿಗೆ ತೇರ್ಗಡೆಯಾಗಿರಬೇಕು. ಪ್ರಮುಖ ವಿಷಯಗಳು (Key Subjects): ಸೆಮಿಕಂಡಕ್ಟರ್ ಸಾಧನಗಳು (Semiconductor Devices). ಮೈಕ್ರೋ-ಎಲೆಕ್ಟ್ರಾನಿಕ್ಸ್ (Micro-electronics). ಸಿಎಮ್‌ಒಎಸ್ ವಿನ್ಯಾಸ (CMOS Design). ಎಎಸ್‌ಐಸಿ ವಿನ್ಯಾಸ ಮತ್ತು ಪರಿಶೀಲನೆ (ASIC Design & Verification). FPGA ವಿನ್ಯಾಸ (FPGA Design). ಎಲೆಕ್ಟ್ರಾನಿಕ್ ವಿನ್ಯಾಸ ಆಟೊಮೇಷನ್ (EDA) ಪರಿಕರಗಳು (Cadence, Synopsys, Mentor Graphics). ಕೌಶಲ್ಯಗಳು (Skills Learned): Verilog/VHDL ಕೋಡಿಂಗ್, ಸರ್ಕ್ಯೂಟ್ ಸಿಮ್ಯುಲೇಶನ್, ಮತ್ತು ಚಿಪ್ ಲೇಔಟ್ ವಿನ್ಯಾಸ. ಕರ್ನಾಟಕದಲ್ಲಿ ಪ್ರಮುಖ ಸಂಸ್ಥೆಗಳು (Top Colleges in Karnataka) ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ (Presidency University), ಬೆಂಗಳೂರು. ಅಮಿಟಿ ವಿಶ್ವವಿದ್ಯಾಲಯ (Amity University), ಬೆಂಗಳೂರು. ಗಾರ್ಡನ್ ಸಿಟಿ ವಿಶ್ವವಿದ್ಯಾಲಯ (Garden City University), ಬೆಂಗಳೂರು. ಆರ್‌ವಿ ಕಾಲೇಜ್ ಆಫ್ ಎಂಜಿನಿಯರಿಂಗ್ (RVCE), ಬೆಂಗಳೂರು (M.Tech VLSI). ಉದ್ಯೋಗಾವಕಾಶಗಳು (Career Opportunities) ಗಿಐಖಐ ಪದವೀಧರರು ಕೆಳಗಿನ ಪಾತ್ರಗಳಲ್ಲಿ ಕೆಲಸ ಮಾಡಬಹುದು: Front-End Designer: Verilog/VHDL ಕೋಡಿಂಗ್ ಮತ್ತು ಸಿಮ್ಯುಲೇಶನ್. Physical Design Engineer: ಚಿಪ್ ವಿನ್ಯಾಸವನ್ನು ಭೌತಿಕವಾಗಿ ಲೇಔಟ್ ಮಾಡುವುದು. Verification Engineer: ವಿನ್ಯಾಸದ ದೋಷಗಳನ್ನು ಪರೀಕ್ಷಿಸುವುದು. ಸೆಮಿಕಂಡಕ್ಟರ್ ಕಂಪನಿಗಳು: Intel, Qualcomm, Nvidia, Samsung, Texas Instrument ಮುಂತಾದವುಗಳಲ್ಲಿ ಉದ್ಯೋಗ ಅವಕಾಶ.

## ವಿಶ್ವ ಆರೋಗ್ಯ ದಿನಾಚರಣೆ-ಧ್ಯೇಯವಾಕ್ಯ: ಆರೋಗ್ಯಕ್ಕಾಗಿ ಒಟ್ಟಾಗಿ,ವಿಜ್ಞಾನದೊಂದಿಗೆ ನಿಲ್ಲೋಣ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಆಡಳಿತ ಜಿಲ್ಲಾ ಪಂಚಾಯತ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಇವರ ಸಂಯುಕ್ತ ಆಶ್ರಯದಲ್ಲಿ ಇಂದು ಮಣ್ಣಿಕೇರಿ ಕ್ಯಾಂಪ್ ನ ಸಮುದಾಯದಲ್ಲಿ ವಿಶ್ವ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತು.**

ಕಾರ್ಯಕ್ರಮದ ಕುರಿತು ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ವಿಶ್ವ ಆರೋಗ್ಯ ಸಂಸ್ಥೆ ಒಂದು ಥೀಮನ್ನು ಮುಂದಿಟ್ಟುಕೊಂಡು ಆರೋಗ್ಯ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ ಆರೋಗ್ಯಕ್ಕಾಗಿ ಒಟ್ಟಾಗಿ ವಿಜ್ಞಾನ ದೊಂದಿಗೆ ನಿಲ್ಲೋಣ ಎಂಬ ಘೋಷವಾಕ್ಯದೊಂದಿಗೆ ಆಚರಣೆ ಮಾಡಲಾಗುತ್ತದೆ ಒಟ್ಟಾರೆ ಸಾರ್ವಜನಿಕರ ಆರೋಗ್ಯವನ್ನು ಕಾಪಾಡಬಹುದು ಹಾಗೂ ಹಾಗೂ ಸಾರ್ವಜನಿಕರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು ಈ ದಿನಾಚರಣೆ ಉದ್ದೇಶವಾಗಿದೆ.





ಅದಕ್ಕಾಗಿ ಪ್ರತಿಯೊಬ್ಬ ಸಾರ್ವಜನಿಕರು ತಮ್ಮ ಆರೋಗ್ಯದ ಕಡೆ ಗಮನ ಹರಿಸಬೇಕು ಹೆಚ್ಚಾಗಿ ತಾಯಿ ಮಕ್ಕಳ ಆರೈಕೆಯಲ್ಲಿ ಕಾಳಿಜಿ ವಹಿಸಬೇಕು ಪ್ರಶಕ್ತ ವಿದ್ಯುನ್ಮಾನದಲ್ಲಿ ಮುನ್ನಡೆಯುತ್ತಿರುವ ವಿಜ್ಞಾನದ ಜೊತೆಯಲ್ಲಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮಹತ್ವವಾಗಿದೆ. ಜ್ಞಾನವಿಲ್ಲದ ಜನತೆಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಸರಿ ದಾರಿಯಲ್ಲಿ ನಡೆಯುವಂತೆ ಆರೋಗ್ಯ ಶಿಕ್ಷಣ ನೀಡುವುದು ಹಾಗೂ ಕಾಲಕಾಲಕ್ಕೆ ತೆಗೆದುಕೊಳ್ಳಬೇಕಾದ ಔಷಧಗಳ ಬಗ್ಗೆ ಅರಿವು ಮೂಡಿಸುವುದು ನೈರ್ಮಲ್ಯ ಪರಿಸರ ಸ್ವಚ್ಛತೆ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳುವುದು ಇವುಗಳ ಬಗ್ಗೆ ಅರಿವು ಮೂಡಿಸುವುದು ಈ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ ಎಂದರು.

ನಂತರ ಮಾತನಾಡಿದ ಪ್ರಾಥಮಿಕ ಆರೋಗ್ಯ ಸುರಕ್ಷತೆ ಅಧಿಕಾರಿ ನಿಂಗಮ್ಮ ಅವರು ಗರ್ಭಿಣಿಯ ಅವಧಿಯಲ್ಲಿ ಮತ್ತು ನಂತರದ ಹೆರಿಗೆಯ ಅವಧಿಯಲ್ಲಿ ತಾಯಿ ಮತ್ತು ಮಗುವಿನ ಹಾರೈಕೆ ಬಗ್ಗೆ ಕಾಳಜಿ ವಹಿಸುವುದು ಬಹಳ ಮುಖ್ಯವಾಗಿದೆ ಉತ್ತಮ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ತಮ್ಮ ಮನೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮಹತ್ವವಾಗಿದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ತಮ್ಮ ಆರೋಗ್ಯದ ಬಗ್ಗೆ ಪ್ರತಿಯೊಬ್ಬರು ಕೂಡ ಜಾಗೃತಿ ವಹಿಸಬೇಕು ಎಂದರು. ಈ ಸಂದರ್ಭದಲ್ಲಿ ಆಶಾ ಕಾರ್ಯಕರ್ತೆ ಈರಮ್ಮ ತಾಯಂದಿರು ಮತ್ತು ಸಾರ್ವಜನಿಕರು ಉಪಸ್ಥಿತರಿದ್ದರು.

## ಜೋಳ ಖರೀದಿ ಕೇಂದ್ರಗಳಲ್ಲಿ ಗ್ರೇಡರ್ ಗಳಿಂದ ಲಂಚಾವತಾರ ರೈತರ ಆಕ್ರೋಶ ಅಮಾನತಿಗೆ ಒತ್ತಾಯ



**ನೈಜ್ಯ ದೆಸೆ ನ್ಯೂಸ್**

**ತಾಲೂಕಿನ ಬೂದಿವಾಳ ಗ್ರಾಮದ ಸಹಕಾರಿ ಕೃಷಿ ಪತ್ತಿನ ಸಹಕಾರ ಸಂಘದ ಜೋಳ ಖರೀದಿ ಕೇಂದ್ರದಲ್ಲಿ ರೈತರಿಂದ ಗ್ರೇಡರ್ ಗಳು ಪ್ರತಿ ಕ್ವಿಂಟಾಲ್ ಗೆ 10 ರೂ. ಲಂಚ ಕೇಳುತ್ತಿದ್ದಾರೆ. ಮೊದಲೇ ಜೋಳ ಖರೀದಿ ಕೇಂದ್ರವನ್ನು ತಡವಾಗಿ ಪ್ರಾರಂಭಿಸಿದ್ದು, ಒಂದು ಕಡೆಯಾದರೆ, ಇನ್ನೊಂದು ಕಡೆಗೆ ಜೋಳ ಕಪ್ಪಿದೆ, ನುಸಿ ಬಿದ್ದಿವೆ, ಹುಳ ಕಾಣಿಸ್ತಿವೆ, ಎಂದು ಸಬೂಬು ಹೇಳಿ ರೈತರಿಂದ ಹಣ ಕಿತ್ತುವ ಕಿತಾಪತಿ ಪ್ಲಾನ್ ಗ್ರೇಡರ್ ಗಳಿಂದ ಆಗುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪ್ರಧಾನ ಕಾರ್ಯದರ್ಶಿ ಹನುಮಂತ ಗೋಡಿಹಾಳ ಆರೋಪ ಮಾಡಿದರು.**

ತಾಲೂಕಿನ ಬೂದಿವಾಳ ಗ್ರಾಮದಲ್ಲಿ ಮಂಗಳವಾರ ಗ್ರೇಡರ್ ಗಳು ಜೋಳ ಖರೀದಿ ಮಾಡಲು ಪ್ರತಿ ಕ್ವಿಂಟಾಲ್ ಗೆ 10 ರೂ.ಲಂಚಕ್ಕೆ ಬೇಡಿಕೆಯಿಟ್ಟ ಗ್ರೇಡರ್ ಗಳ ವಿರುದ್ಧ ದಿಢೀರ್ ಪ್ರತಿಭಟನೆ ನಡೆಸಿ ಮಾತನಾಡಿದ ಅವರು, ಹಣ ಕೊಡಲು ಆಗುವುದಿಲ್ಲ ಎಂದರೆ ಅವರ ಜೋಳವನ್ನು ಗ್ರೇಡರ್ ಗಳು ಖರೀದಿ ಮಾಡುವುದಿಲ್ಲ. ಈ ಕಾರಣವಾಗಿ ರೈತರು ಮತ್ತು ಗ್ರೇಡರ್ ಗಳ ಜೊತೆ ಮಾತಿನ ಚಕಮಕಿ ನಡೆದ ಕಾರಣ ಏಕಾಏಕಿ ಗ್ರೇಡರ್ ಮತ್ತು ಹರಟೇನೂರು ಗ್ರಾಮದ ರೈತರಾದ ರಾಜಪ್ಪ ಕುಂಬಾರ ಇವರ ನಡುವೆ ವಾಗ್ವಾದ ನಡೆದು ರೈತ ರಾಜಪ್ಪನ ಮೇಲೆ ಗ್ರೇಡರ್ ಹಲ್ಲೆ ನಡೆಸಿ ರೈತನ ಬಟ್ಟೆ ಹರಿದ ಘಟನೆ ಜರುಗಿದೆ.

ಈ ವಾಗ್ವಾದ ವಿಚಾರವನ್ನ ಮತ್ತು ಖರೀದಿ ಕೇಂದ್ರಗಳಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯದ ಘಟನೆಗಳನ್ನು ತಿಳಿಸಲು ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿಯವರಿಗೆ ಫೋನ್ ಕರೆ ಮಾಡಿದರೆ, ಕರೆಗೆ ಸರಿಯಾಗಿ ಸ್ಪಂದಿಸದೆ ಫೋನ್ ಕರೆ ಕಟ್ ಮಾಡಿದರು ಎಂದು ದೂರಿದರು. ಇದರಿಂದಾಗಿ ರೈತರು ಮತ್ತಷ್ಟು ಆಕ್ರೋಶಗೊಂಡು ರಸ್ತೆಯಲ್ಲೇ ಜೋಳ ತುಂಬಿದ ಟ್ರಾಕ್ಟರ್ ನಿಲ್ಲಿಸಿ ಪ್ರತಿಭಟನೆ ನಡೆಸಿದರು. ರೈತನ ಮೇಲೆ ಹಲ್ಲೆ ಮಾಡಿದ ಗ್ರೇಡರ್ ನನ್ನು ಕೂಡಲೇ ಕೆಲಸದಿಂದ ಅಮಾನತು ಮಾಡಬೇಕು, ಸರ್ಕಾರ ಖರೀದಿ ಕೇಂದ್ರಗಳನ್ನು ಬಹಳ ದಿನದ ನಂತರ ಪ್ರಾರಂಭ ಮಾಡಿ ಈಗ ಇಲ್ಲ ಸಲ್ಲದ ಕುಂಟುನೆಪವೊಡ್ಡಿ, ಪ್ರತಿಯೊಬ್ಬ ರೈತರಿಂದ ಪ್ರತಿ ಕ್ವಿಂಟಾಲ್ ಗೆ ಇಂತಿಷ್ಟು ಹಣ ಕೊಡಬೇಕು ಎಂದು ಗ್ರೇಡರ್ ಗಳು ಲಂಚ ವಸೂಲಿಗೆ ಇಳಿದಿದ್ದಾರೆ ಜಿಲ್ಲೆಯ ಪ್ರತಿ ಜೋಳ ಖರೀದಿ ಕೇಂದ್ರಗಳಲ್ಲೂ ನಡೆಯುತ್ತಿದೆ ಇಂತಹ ಸುಲಿಗೆ, ಇದಕ್ಕೆಲ್ಲಾ ಸರ್ಕಾರವೇ ನೇರಹೊಣೆ ತಾಲೂಕಿನ ಜನಪ್ರತಿನಿಧಿಗಳು ಮಧ್ಯಪ್ರವೇಶ ಮಾಡಿ ರೈತರಿಂದ ಹಣ ಸುಲಿಗೆ ಮಾಡುವುದು ತಡೆಗಟ್ಟಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯ ಮಾಡಿತು.

ಪ್ರತಿಭಟನಾ ಸ್ಥಳಕ್ಕೆ ಸಿಪಿಐ ಆಗಮಿಸಿ ಗಲಾಟೆ ತಿಳಿಗೊಳಿಸಿದರು. ಇದೇ ವೇಳೆ: ಬೂದಿವಾಳ, ಮಾಡಸಿರವಾರ, ಬೆಳಗುರ್ಕಿ, ಅಲಬನೂರು, ಉದ್ಬಾಳ, ಗ್ರಾಮಗಳ ನೂರಾರು ಜನ ರೈತರು ದಿಢೀರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಏವೂರ-ಖಾನಾಪುರ ಎಸ್ ರಸ್ತೆ ಕಾಮಗಾರಿ ಕಳಪೆ ಆರೋಪ; ಎನ್ ಎಮ್ ನದಾಫ್ ಆಕ್ರೋಶ

**ನೈಜ್ಯ ದೆಸೆ ನ್ಯೂಸ್**

**ಸುರಪುರ: ತಾಲೂಕಿನ ರಾಜ್ಯ ಹೆದ್ದಾರಿ 16ರ ಏವೂರಿನಿಂದ ಖಾನಾಪುರ ಎಸ್‌ಕೆ ಜಿಲ್ಲಾ ಮುಖ್ಯ ರಸ್ತೆಯವರೆಗೆ ನಿರ್ಮಿಸಲಾದ ರಸ್ತೆ ಕಾಮಗಾ-ರಿಯಲ್ಲಿ ಕಳಪೆ ಕೆಲಸ ನಡೆದಿದೆ ಎಂಬ ಆರೋಪ ಕೇಳಿಬಂದಿದೆ.**



ಸುಮಾರು 5 ಕಿಲೋಮೀಟರ್ ಉದ್ದದ ಈ ರಸ್ತೆ ಸುಧಾರಣೆ ಕಾಮಗಾ-ರಿಗೆ 338.60 ಲಕ್ಷಗಳ ಅಂದಾಜು ಮಂಜೂರಾಗಿದ್ದು, ಗುತ್ತಿಗೆ ಮೊತ್ತ 314.55 ಲಕ್ಷ ಎಂದು ತಿಳಿದುಬಂದಿದೆ.

ಕೆಂಭಾವಿ ಪಟ್ಟಣ ಸಮೀಪ ನಿರ್ಮಿಸಿದ ರಸ್ತೆ ತಿಂಗಳು ಕಳೆದ ಮುನ್ನವೇ ಕೀಳಿ ಹೋಗಿದ್ದು, ಡಾಂಬರ್ ಕಿತ್ತುಕೊಂಡು ಹೋಗುತ್ತಿದೆ ಎಂದು ಗ್ರಾಮಸ್ಥರು ದೂ-ರಿದ್ದಾ-ರೆ. "ಡಾಂಬರ ರಸ್ತೆಗೆ ಬಣ್ಣ-ಸುಣ್ಣ ಹಚ್ಚಿದಂತಿದೆ" ಎಂದು ಎನ್ ಎಮ್ ನದಾಫ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಲಬುರ್ಗಿ ಮೂಲದ ಪ್ರಥಮ ದರ್ಜೆ ಗುತ್ತಿಗೆದಾರರೊಬ್ಬರು ಈ ಕಾಮಗಾರಿ ನಿರ್ವಹಿಸಿದ್ದಾಗಿ ತಿಳಿದುಬಂದಿದೆ. ಸಂಬಂಧಪಟ್ಟ ಇಂಜಿನಿಯರ್‌ಗಳು ಹಾಗೂ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಗುಣಮಟ್ಟದ ತನಿಖೆ ಮಾಡಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಅದರ್ಶ ವಿದ್ಯಾರ್ಥಿಗಳಾಗಲು ಸ್ಕೌಟ್ಸ್ ಮತ್ತು ಗೈಡ್ಸ್ ಸಹಕಾರಿ: ಬೀರಪ್ಪ ಶಂಭೋಜಿ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನಿಂದ ವಿದ್ಯಾರ್ಥಿಗಳು ಉತ್ತಮ ಮಾನವೀಯ ಮೌಲ್ಯಗಳನ್ನು ಹೊಂದುವುದರ ಜೊತೆಗೆ ಸೌಹಾರ್ದತೆಯ ಜೀವನ ಸಾಗಿಸಲು ಸಾಧ್ಯವಾಗುವುದು ಮತ್ತು ಸದಾ ಕ್ರಿಯಾಶೀಲತೆಯಿಂದ ಉತ್ತಮ ಆದರ್ಶ ವಿದ್ಯಾರ್ಥಿಗಳಾಗಲು ಸಾಧ್ಯವೆಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಸ್ಕೌಟ್ ಮಾಸ್ಟರ್ ಬೀರಪ್ಪ ಶಂಭೋಜಿ ಹೇಳಿದರು.**

ಅವರು ನಗರದ ಉಪ್ಪಾರವಾಡಿ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥ-'ಮಿಕ ಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ಸಿಂಧನೂರು, ಅಕ್ಕಮಹಾದೇವಿ ಗೈಡ್ ಘಟಕ ಮುಕ್ತದಳ, ಅಂಬಾದೇವಿ ಗೈಡ್ ಘಟಕ, ರಾಮಕೃಷ್ಣ ಕಬ್ ಮುಕ್ತದಳ ಸಂಯುಕ್ತಾಶ್ರಯದಲ್ಲಿ ಬೇಸಿಗೆ ಶಿಬಿರದ ಎರಡನೆಯ ದಿನದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.




ದುಗ್ಗಮನಗುಂಡ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ಮುಖ್ಯ ಶಿಕ್ಷಕ ಕಬ್ ಮಾಸ್ಟರ್ ಶಂಕರದೇವರು ಹಿರೇಮಠ ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಯಲ್ಲಿ ಪಾಲ್ಗೊಳ್ಳುವುದರಿಂದ ಶಿಸ್ತು, ಸಮಯಪಾಲನೆ, ಏಕಾಗ್ರತೆ, ಪರಿಸರ ರಕ್ಷಣೆ ಮಾಡುವ ಉತ್ತಮ ಗುಣಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸಿಂಧನೂರಿನ ಬಾಲಕಿಯರ ಸರಕಾರಿ ಪ್ರೌಢಶಾಲೆಯ ಗೈಡ್ ಕ್ಯಾಪ್ಟನ್ ಬಸಮ್ಮ ಹಿರೇಮಠ ಮಾತನಾಡಿ ವಿದ್ಯಾರ್ಥಿಗಳು ಬೇಸಿಗೆ ಶಿಬಿರದಲ್ಲಿಯ ನೀಡಿದ ಉತ್ತಮ ವಿಚಾರಗಳನ್ನು ಅಳವಡಸಿಕೊಳ್ಳಬೇಕೆಂದರು, ನ್ಯಾಯವಾದಿ ಸ್ಕೌಟ್ ಮಾಸ್ಟರ್ ಬಸವರಾಜ್ ಹುಲಿಹೈದರ್ ಮಾತನಾಡಿ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಪಡೆದಯುವುದ-ರಿಂದ ಉತ್ತಮ ಜೀವನ ಶೈಲಿಯನ್ನು ಹೊಂದಲು ಸಾಧ್ಯವಾಗುತ್ತದೆ ಎಂದರು. ಉಪಸ್ಥಿತರಿದ್ದರು.

# ಸನ್ ರೈಸ್ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ನಗರದ ಸನ್ ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಶನ್‌ನಡಿ ಕಾರ್ಯನಿರ್ವಹಿಸುತ್ತಿರುವ ಡಿ-ಫಾರ್ಮಸಿ, ನರ್ಸಿಂಗ್ ಹಾಗೂ ಪಾರಾ ಮೆಡಿಕಲ್ ಕಾಲೇಜಿನಲ್ಲಿ ವಿಶ್ವ ಆರೋಗ್ಯ ದಿನಾಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಮತ್ತು ವೈಜ್ಞಾನಿಕ ದೃಷ್ಟಿಕೋನದೊಂದಿಗೆ ಆಚರಿಸಲಾಯಿತು. ಈ ವರ್ಷದ ಘೋಷವಾಕ್ಯ ``Together for Health: Stand with Science'' (ಆರೋಗ್ಯಕ್ಕಾಗಿ ಒಂದಾಗಿ ವಿಜ್ಞಾನಕ್ಕೆ ಬೆಂಬಲವಾಗಿ ನಿಲ್ಲೋಣ) ಎಂಬ ಥೀಮ್ ಅನ್ನು ಆಧಾರವಾಗಿಟ್ಟುಕೊಂಡು ಕಾರ್ಯಕ್ರಮವನ್ನು ಆಯೋಜಿಸಲಾಯಿತು.**

ಕಾರ್ಯಕ್ರಮದ ಅಂಗವಾಗಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಈ ಶಿಬಿರದಲ್ಲಿ ರಕ್ತದ ಒತ್ತಡ (BP), ರಕ್ತದ ಸಕ್ಕರೆ ಪ್ರಮಾಣ (GRBS), ಎತ್ತರ, ತೂಕ, BMI ಮುಂತಾದ ಮೂಲಭೂತ ಆರೋಗ್ಯ ಪರೀಕ್ಷೆಗಳು ನಡೆಸಿ, ವ್ಯಕ್ತಿಗತ ಆರೋಗ್ಯ ಸ್ಥಿತಿಯ ಬಗ್ಗೆ ಅರಿವು ಮೂಡಿಸಲಾಯಿತು. ಇದರಿಂದ ಸಿಬ್ಬಂದಿಯಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಹೆಚ್ಚಿಸುವ ಪ್ರಯತ್ನ ಕೈಗೊಳ್ಳಲಾಯಿತು. ಕಾರ್ಯಕ್ರಮವನ್ನು ಗಿಡಕ್ಕೆ ನೀರುಣಿಸುವ ಮೂಲಕ ಪರಿಸರ ಸಂರಕ್ಷಣೆ ಮತ್ತು ಆರೋಗ್ಯದ ನಡುವಿನ ಸಂಬಂಧವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಉದ್ಘಾಟಿಸಲಾಯಿತು.

ಆರೋಗ್ಯಕರ ಪರಿಸರವೇ ಉತ್ತಮ ಆರೋಗ್ಯದ ಮೂಲ ಎಂದು ಸಂದೇಶ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ. ಅತ್ತಾರ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಗೀತಾ ಹಿರೇಮಠ ಅವರು ಭಾಗವಹಿಸಿದರು. ನರ್ಸಿಂಗ್ ವಿಭಾಗದ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ಮಧುರ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಪ್ರಾಸ್ತಾವಿಕವಾಗಿ ಮಾತನಾಡಿದ ಲಾಜರ್ ಸಿರಿಲ್ ಅವರು, "ಆರೋಗ್ಯವೇ ಭಾಗ್ಯ ಎಂಬ ಮಾತು ಕೇವಲ ಒಂದು ನುಡಿಗಟ್ಟು ಅಲ್ಲ, ಅದು ಜೀವನದ ಮೂಲತತ್ವವಾಗಿದೆ. ಸರ್ವ ಸಂಪತ್ತುಗಳಿದ್ದರೂ ಆರೋಗ್ಯ ಇಲ್ಲದಿದ್ದರೆ ಅವುಗಳೆಲ್ಲವೂ ಅರ್ಥಹೀನವಾಗುತ್ತದೆ.




ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಕಡೆ ಹೆಚ್ಚು ಗಮನಹರಿಸಬೇಕು. ನಾವು ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಸಮಾಜದ ಆರೋಗ್ಯವನ್ನು ಕಾಪಾಡುವ ಜವಾಬ್ದಾರಿ ಹೊಂದಿದ್ದೇವೆ. ಆರೋಗ್ಯ ಸೇವಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ನಿಮ್ಮೆಲ್ಲರು ಹೆಚ್ಚಿನ ಜಾಗೃತಿಯಿಂದ ಮತ್ತು ಹೊಣೆಗಾರಿಕೆಯಿಂದ ನಡೆದುಕೊಳ್ಳಬೇಕು" ಎಂದು ತಿಳಿಸಿದರು. ಅವರು ``Prevention is better than cure'' ಎಂಬ ತತ್ವದ ಮಹತ್ವವನ್ನು ಒತ್ತಿ ಹೇಳಿ, ಮುನ್ನೆಚ್ಚ-ರಿಕೆ ಕ್ರಮಗಳು ಆರೋಗ್ಯದ ಕೀಲಿಕೈ ಎಂದರು.

ಮುಖ್ಯ ಅತಿಥಿಯಾದ ಶ್ರೀಮತಿ ಗೀತಾ ಹಿರೇಮಠ ಅವರು ತಮ್ಮ ಉಪನ್ಯಾಸದಲ್ಲಿ ಸಾರ್ವಜನಿಕ ಆರೋಗ್ಯದ ಮಹತ್ವವನ್ನು ವಿವರಿಸಿ, ವೈಜ್ಞಾನಿಕ ಆಧಾರಿತ ಆರೋಗ್ಯ ಕ್ರಮಗಳನ್ನು ಅನುಸರಿಸುವ ಅಗತ್ಯತೆಯನ್ನು ತಿಳಿಸಿದರು. ಸ್ವಚ್ಛತೆ, ಶುದ್ಧ ಕುಡಿಯುವ ನೀರು, ಸಮತೋಲನ ಆಹಾರ, ನಿಯಮಿತ ವ್ಯಾಯಾಮ, ಮಾನಸಿಕ ಆರೋಗ್ಯದ ಕಾಳಜಿ, ಲಸಿಕೆಗಳ ಮಹತ್ವ ಹಾಗೂ ಸಮಯೋಚಿತ ಆರೋಗ್ಯ ತಪಾಸಣೆಗಳ ಬಗ್ಗೆ ವಿವರಿಸಿದರು. ಅವರು "ವೈಯಕ್ತಿಕ ಆರೋಗ್ಯದ ಜೊತೆ ಸಮುದಾಯದ ಆರೋಗ್ಯವೂ equally ಮುಖ್ಯ. ಪ್ರತಿಯೊಬ್ಬರೂ ಆರೋಗ್ಯದ ದೂತರಾಗಬೇಕು" ಎಂದು ಕರೆ ನೀಡಿದರು.







ಅಧ್ಯಕ್ಷೀಯ ಭಾಷಣದಲ್ಲಿ ಇರ್ಫಾನ್ ಕೆ. ಅತ್ತಾರ್ ಅವರು, ಇಂದಿನ ಯುಗದಲ್ಲಿ ಜೀವನಶೈಲಿ ಸಂಬಂಧಿತ ಕಾಯಿಲೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯದ ಕಡೆ ಹೆಚ್ಚಿನ ಗಮನ ಅಗತ್ಯವಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಆರೋಗ್ಯಕರ ಅಭ್ಯಾಸಗಳನ್ನು ಅಳವಡಿಸಿಕೊಂಡು, ಸಮಾಜದಲ್ಲಿ ಆರೋಗ್ಯ ಜಾಗೃತಿ ಮೂಡಿಸುವಲ್ಲಿ ಮುಂಚೂಣಿಯಲ್ಲಿ ಇರಬೇಕು ಎಂದು ಪ್ರೇರೇಪಿಸಿದರು. ಸಂಸ್ಥೆಯ ವತಿಯಿಂದ ಇಂತಹ ಆರೋಗ್ಯ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಲಾಜರ್ ಸಿರಿಲ್, ಚಕ್ರವರ್ತಿ, ಆಶುಭಾಷಾ, ವೀರೇಶ್, ವೀರೇಶ್ವರಿ, ಶೋಭಾ, ರಾಧಿಕಾ, ಸಂತೋಷಿ ಸೇರಿದಂತೆ ಎಲ್ಲಾ ವಿಭಾಗಗಳ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು. ಕಾರ್ಯಕ್ರಮವು ಆರೋಗ್ಯ ಜಾಗೃತಿ, ವೈಜ್ಞಾನಿಕ ದೃಷ್ಟಿಕೋನ ಹಾಗೂ ಸಾಮಾಜಿ-ಕ ಹೊಣೆಗಾರಿಕೆಯ ಬಗ್ಗೆ ಸ್ಪಷ್ಟ ಸಂದೇಶವನ್ನು ನೀಡುವ ಮೂಲಕ ಯಶಸ್ವಿಯಾಗಿ ನೆರವೇರಿತು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.